ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಡಿಸೆಂಬರ್ 05, 2024

ಸಂಪುಟ : 51 ಸಂಚಿಕೆ : 202 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com



## ಬಾಂಗ್ಲಾದಲ್ಲಿ ಹಿಂದೂಗಳ ಮೇಲಿನ ದಾಳಿಗೆ ಖಂಡನೆ

### ಇಸ್ಕಾನ್‌ನ ಚಿನ್ಮಯ್ ಕೃಷ್ಣದಾಸ್ ಬಿಡುಗಡೆಗೆ ಆಗ್ರಹಿಸಿ ನಗರದಲ್ಲಿ ಬೃಹತ್ ಪ್ರತಿಭಟನೆ

ದಾವಣಗೆರೆ, ಜು. 4- ಬಾಂಗ್ಲಾ ದೇಶದಲ್ಲಿ ಹಿಂದೂಗಳ ಮೇಲಿನ ದಾಳಿ ಹಾಗೂ ಧಾರ್ಮಿಕ ಮುಖಂಡರ ಬಂಧನ ಖಂಡಿಸಿ ಹಿಂದೂ ಹಿತರಕ್ಷಣಾ ಸಮಿತಿ ನೇತೃತ್ವದಲ್ಲಿ ಬುಧವಾರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿ ಕೇಸರಿ ಸಾಲು ಧರಿಸಿ ಆಗಮಿಸಿದ್ದ ಪ್ರತಿಭಟನಾಕಾರರು, ಬಾಂಗ್ಲಾದೇಶದ ವಿರುದ್ಧ ಘೋಷಣೆ ಕೂಗಿದರು. ನಂತರ ಗಾಂಧಿ ವೃತ್ತದ ಮೂಲಕ ಉಪ ವಿಭಾಗಾಧಿಕಾರಿ ಕಚೇರಿಗೆ ತೆರಳಿ ಅಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಹಿಂದೂಗಳ ಮೇಲಿನ ದೌರ್ಜನ್ಯವನ್ನು ಕೂಡಲೇ ನಿಲ್ಲಿಸಬೇಕು. ಇಸ್ಕಾನ್‌ನ ಚಿನ್ಮಯ್ ಕೃಷ್ಣದಾಸ್ ಅವರನ್ನು ಕೂಡಲೇ ಸೆರೆವಾಸದಿಂದ ಮುಕ್ತಗೊಳಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಜಡೇಸಿದ್ದೇಶ್ವರ ಸ್ವಾಮೀಜಿ ಮಾತನಾಡಿ, ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ ಖಂಡನೀಯ. ಇಂತಹ ಕೃತ್ಯಗಳನ್ನು ಕೂಡಲೇ ನಿಲ್ಲಿಸಬೇಕು ಎಂದು ಆಗ್ರಹಿಸಿದರು. ಹಿಂದೂಗಳು ಸಂಘಟಿತರಾಗಬೇಕು ಈಗಲೂ ಎಚ್ಚೆತ್ತುಕೊಳ್ಳದಿದ್ದರೆ ಭಗವಂತನೂ ನಮ್ಮನ್ನು ರಕ್ಷಿಸಲಾರ. ನಾವೆಲ್ಲಾ ಹಿಂದೂಗಳು ಒಂದೇ ಎಂಬ ಭಾವನೆಯಲ್ಲಿ ಹೋರಾಟ ನಡೆಸಬೇಕಿದೆ ಎಂದು ಕರೆ ನೀಡಿದರು.



ಮನೆಯ ಒಳಗೆ ಜಾತಿಗಳ ಬಗ್ಗೆ ಮಾತನಾಡೋಣ. ಆದರೆ ಮನೆಯಿಂದ ಹೊರ ಬಂದಾಗ ನಾವೆಲ್ಲಾ ಹಿಂದೂಗಳು ಒಂದೇ ಎಂಬ ಭಾವ ಇರಬೇಕು ಎಂದ ಶ್ರೀಗಳು, ಕೂಡಲೇ ಹಿಂದೂಗಳ ಮೇಲಿನ ದೌರ್ಜನ್ಯ ನಿಲ್ಲಿಸುವಂತೆ ಕೇಂದ್ರ ಸರ್ಕಾರ ಬಾಂಗ್ಲಕ್ಕೆ ಎಚ್ಚರಿಕೆ ನೀಡಬೇಕು ಎಂದರು.

ಪ್ರಾಂತ ಸಾಮರಸ್ಯ ಸಹ ಸಂಚಾಲಕ ಗೋ. ರುದ್ರಯ್ಯ ಮಾತನಾಡಿ, ಇಂದು ಬಾಂಗ್ಲಾದೇಶದಲ್ಲಿ ದೌರ್ಜನ್ಯ ನಡೆಯುತ್ತಿದೆ. ಈ ಘಟನೆಗಳು ಮುಂದೆ ಭಾರತದಲ್ಲಿ ನಡೆದರೂ ಆಶ್ಚರ್ಯವಿಲ್ಲ. ಹಿಂದೂಗಳು ಈ ವಿಷಯವನ್ನು ಗಂಭೀರವಾಗಿ (4ನೇ ಪುಟಕ್ಕೆ)

## ಲೋಕಾ-ಇಡಿ ವರದಿಯಲ್ಲಿ ಭಿನ್ನತೆ

### ಮುಡಾ: ಲೋಕಾಯುಕ್ತವೇ ಇಕ್ಕಟ್ಟಿಗೆ ಸಿಲುಕುವ ಪರಿಸ್ಥಿತಿ?

ಬೆಂಗಳೂರು,ಡಿ.4- ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಿರುವ ಬಿಡಿ ನಿವೇಶನಗಳ ಹಂಚಿಕೆ ವಿವಾದದ ತನಿಖೆ ವಿಷಯದಲ್ಲಿ ಲೋಕಾಯುಕ್ತವೇ ಇಕ್ಕಟ್ಟಿಗೆ ಸಿಲುಕುವ ಪರಿಸ್ಥಿತಿ ಎದುರಾಗಿದೆ ಎನ್ನಲಾಗಿದೆ.

ನ್ಯಾಯಾಲಯದ ಆದೇಶದಂತೆ ಲೋಕಾಯುಕ್ತ ಬಹುತೇಕ ತನಿಖೆ ಪೂರ್ಣಗೊಳಿಸಿ ದಾಖಲೆ ಸಮೇತ ಹೈಕೋರ್ಟ್‌ಗೆ ವರದಿ ಸಲ್ಲಿಸಲು ಸಿದ್ಧತೆ ನಡೆಸಿತ್ತು.

ಬಿಡಿ ನಿವೇಶನಗಳ ಹಂಚಿಕೆ ಪ್ರಕರಣವನ್ನು ಸಿಬಿಐಗೆ ವಹಿಸುವ ಸಂಬಂಧ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠದ ಮುಂದೆ ಡಿಸೆಂಬರ್ 10ರಂದು ಅರ್ಜಿ ವಿಚಾರಣೆಗೆ ಬರಲಿದೆ.

ಅಂದೇ ತನಿಖಾ ವರದಿಯನ್ನೂ ಸಲ್ಲಿಸುವಂತೆ ಲೋಕಾಯುಕ್ತಕ್ಕೆ ನ್ಯಾಯಮೂರ್ತಿಗಳು ಹಿಂದಿನ ವಿಚಾರಣೆ ವೇಳೆ ಆದೇಶ ಮಾಡಿದ್ದರು.



ಲೋಕಾಯುಕ್ತ ಎಲ್ಲಾ ಕೋನಗಳಿಂದಲೂ ತನಿಖೆ ನಡೆಸಿ, ವಿವರವಾದ ವರದಿ ಸಿದ್ಧಪಡಿಸಿತ್ತು.

ರಾಜ್ಯಪಾಲರ ಪ್ರಾಸಿಕ್ಯೂಷನ್ ಅನುಮತಿ ಹಾಗೂ ಲೋಕಾಯುಕ್ತ ತನಿಖೆ ಆದೇಶ ಪ್ರಶ್ನಿಸಿ ಸಿದ್ದರಾಮಯ್ಯ ಅವರು, ವಿಭಾಗೀಯ ಪೀಠದ ಮುಂದೆ ಸಲ್ಲಿಸಿರುವ ಅರ್ಜಿ ನಾಳೆ ವಿಚಾರಣೆಗೆ ಬರುತ್ತಿದೆ.

ಇದರ ಬೆನ್ನಲ್ಲೇ ಇ.ಡಿ., ಲೋಕಾಯುಕ್ತಕ್ಕೆ ಪತ್ರ ಬರೆದು, ಮುಡಾ ಬಿಡಿ ನಿವೇಶನಗಳ ಹಂಚಿಕೆಗೆ ಸಂಬಂಧಿ ಸಿದಂತೆ ತಾನು ನಡೆಸಿರುವ ತನಿಖಾ ಮಾಹಿತಿಯನ್ನು ನೀಡಿದೆ.

ಇದರಲ್ಲಿ ಮುಖ್ಯಮಂತ್ರಿ ಅವರ ಪತ್ನಿ ಪಾರ್ವತಿ ಅವರಿಗೆ ಹಂಚಿಕೆಯಾಗಿರುವ ನಿವೇಶನ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವುದಲ್ಲದೆ, ಸಿದ್ದರಾಮಯ್ಯ ಅವರಿಂದ ಈ ಹಿಂದೆ ಅಧಿಕಾರ ದುರ್ಬಳಕೆಗೆ ಸಂಬಂಧಿಸಿದಂತೆಯೂ ಕೆಲವು ಮಾಹಿತಿ ನೀಡಿದೆ.

ಸಿದ್ದರಾಮಯ್ಯ ಅವರ ಮೈಸೂರು ಕಚೇರಿಯಲ್ಲಿ ಆಪ್ತ ಸಹಾಯಕರಾಗಿರುವ ಕುಮಾರ್, ನಿವೇಶನಗಳ ಹಂಚಿಕೆಯಲ್ಲಿ ಪ್ರಭಾವ ಬೀರಿದ್ದಾರೆ, ಅಷ್ಟೇ ಅಲ್ಲದೆ, ಪಾರ್ವತಿ ಅವರ ಹೆಸರಿನ ಫೋರ್ಜರಿ ಮಾಡಿ, ಇವರೇ ಮುಡಾ ಕಚೇರಿಯಲ್ಲಿ ಅರ್ಜಿ ಸಲ್ಲಿಕೆ ಮತ್ತು ದಾಖಲೆಗಳನ್ನು ಪಡೆದುಕೊಳ್ಳುವಲ್ಲಿ ವ್ಯವಹರಿಸಿದ್ದಾರೆ ಎಂದು ಆರೋಪಿಸಿದೆ. ಒಟ್ಟಾರೆಯಾಗಿ 1095 (4ನೇ ಪುಟಕ್ಕೆ)

## ಕೀಳು ಮಟ್ಟದ ಹೇಳಿಕೆ ತಕ್ಷಣ ನಿಲ್ಲಿಸಿ: ಎಸ್ಸೆಸ್

### ಬಸವಣ್ಣನವರ ಕುರಿತ ಯತ್ನಾಳ್ ಹೇಳಿಕೆಗೆ ವೀರಶೈವ ಮಹಾಸಭಾ ಖಂಡನೆ

ದಾವಣಗೆರೆ, ಡಿ.4- ಬಸವಣ್ಣನವರ ಕುರಿತು ಶಾಸಕ ಬಸನಗೌಡ ಪಾಟೀಲ ಯತ್ನಾಳ್ ನೀಡಿರುವ ಹೇಳಿಕೆಯನ್ನು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತೀವ್ರವಾಗಿ ಖಂಡಿಸಿದೆ.

ನಾಲಿಗೆಯ ಮೇಲೆ ಹಿಡಿತವಿರಲಿ, ಇಂತಹ ಕೀಳುಮಟ್ಟದ ಹೇಳಿಕೆ ನೀಡುವುದನ್ನು ತಕ್ಷಣ ನಿಲ್ಲಿಸಬೇಕು. ಇಲ್ಲವಾದರೆ, ನಿಮ್ಮನ್ನು ಹಾಳು ಬಾವಿಗೆ ನೂಕುವುದು ಸಮಾಜಕ್ಕೆ ಗೊತ್ತಿದೆ ಎಂದು ಎಚ್ಚರಿಕೆ ನೀಡಿದೆ.



'ನಾಲಿಗೆ ಕುಲ ಹೇಳುತ್ತದೆ' ಎಂಬ ಮಾತಿದೆ. ನಿಮ್ಮ ಹೇಳಿಕೆಗಳು ಮತ್ತು ನಡವಳಿಕೆಗಳನ್ನು ಗಮನಿಸಿದಾಗ ನೀವು ವೀರಶೈವ ಲಿಂಗಾಯತರೇ ಎಂಬ ಅನುಮಾನ ಮೂಡುತ್ತದೆ. ವೀರಶೈವ ಲಿಂಗಾಯಿತರಿಗೆ ಇರಬೇಕಾದ ಆಚಾರವಾಗಲಿ, ಸಂಸ್ಕಾರವಾಗಲಿ ನಿಮ್ಮಲ್ಲಿ ಇರದೇ ಇರುವುದು ದುರದೃಷ್ಟಕರ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಸವಣ್ಣನವರ ವಿಚಾರಗಳು ವಿಶ್ವದಾದ್ಯಂತ ಮುನ್ನೆಲೆಗೆ ಬರುತ್ತಿರುವುದನ್ನು ಸಹಿಸದ ಒಂದು ವರ್ಗ ತಮ್ಮಿಂದ ಇಂತಹ ಹೇಳಿಕೆಗಳನ್ನು ಹೇಳಿಸುತ್ತಿದೆ ಎಂದು ಭಾವಿಸಬೇಕಾಗುತ್ತದೆ.

ಸಮುದಾಯ ಬಾಂಧವರು ಎಂಬ ಕಾರಣಕ್ಕೆ ನಿಮ್ಮ ಹುಚ್ಚಾಟಗಳನ್ನು ಸಹಿಸಿಕೊಂಡಿದ್ದೆವು. ಇಂತಹ ಹುಚ್ಚಾಟಗಳಿಗೆ ಇತಿಶ್ರೀ ಹಾಡುತ್ತೀರೆಂದು ಭಾವಿಸುತ್ತೇವೆ. ಇಲ್ಲವಾದರೆ, ಸಮಾಜವೇ ಇದಕ್ಕೆ ಕಡಿವಾಣ ಹಾಕುತ್ತದೆ ಎಂದು ಶಿವಶಂಕರಪ್ಪ ಹೇಳಿದ್ದಾರೆ.

ವೀರಶೈವ ಲಿಂಗಾಯತ ಸಮುದಾಯ (4ನೇ ಪುಟಕ್ಕೆ)

## ನೇತ್ರ ಸೊಸೈಟಿ ರಾಜ್ಯಾಧ್ಯಕ್ಷರಾಗಿ ಡಾ. ರವೀಂದ್ರ

ದಾವಣಗೆರೆ, ಡಿ. 4- ಕರ್ನಾಟಕ ನೇತ್ರ ಸೊಸೈಟಿ ರಾಜ್ಯಾಧ್ಯಕ್ಷರಾಗಿ ನಗರದ



ಹಿರಿಯ ನೇತ್ರ ತಜ್ಞ ಡಾ. ರವೀಂದ್ರ ಬಣಕಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕರ್ನಾಟಕ ನೇತ್ರ ಸೊಸೈಟಿ ಆಶ್ರಯದಲ್ಲಿ ಉಡುಪಿ ಜಿಲ್ಲಾ ನೇತ್ರ ಸೊಸೈಟಿ ಸಹಯೋಗದಲ್ಲಿ ಕುಂದಾ (4ನೇ ಪುಟಕ್ಕೆ)

## ಸ.ನೌ.ಸಂಘದ ಜಿಲ್ಲಾಧ್ಯಕ್ಷರಾಗಿ ಒಡೇನಪುರ

ದಾವಣಗೆರೆ, ಡಿ.4- ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ದಾವಣಗೆರೆ



ಜಿಲ್ಲಾ ಶಾಖೆಯ ಅಧ್ಯಕ್ಷರ ಸ್ಥಾನಕ್ಕೆ ಇಂದು ನಡೆದ ಚುನಾವಣೆಯಲ್ಲಿ ಭಾರೀ ಬಹುಮತದಿಂದ ಎರಡನೇ ಬಾರಿಗೆ ವೀರೇಶ್ ಎಸ್. ಒಡೇನಪುರ ಅವರು ಜಿಲ್ಲಾಧ್ಯಕ್ಷರಾಗಿ 5 ವರ್ಷದ (3ನೇ ಪುಟಕ್ಕೆ)

## ಸಾರ್ವಜನಿಕ ಪ್ರದೇಶದಲ್ಲಿ ಗೋಮಾಂಸ ನಿಷೇಧ

ನವದೆಹಲಿ, ಡಿ.4- ರೆಸ್ಟೋರೆಂಟ್‌ಗಳು, ಹೋಟೆಲ್‌ಗಳು ಮತ್ತು ಸಾರ್ವಜನಿಕ ಪ್ರದೇಶಗಳಲ್ಲಿ ಗೋಮಾಂಸ ಬಡಿಸುವುದನ್ನು ಮತ್ತು ಸೇವಿಸುವುದನ್ನು ನಿಷೇಧಿಸಲು ಅಸ್ಸಾಂ ಸರ್ಕಾರ ನಿರ್ಧರಿಸಿದೆ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಬುಧವಾರ ಪ್ರಕಟಿಸಿದ್ದಾರೆ.

ಗೋಮಾಂಸ ಸೇವನೆಗೆ ಸಂಬಂಧಿ (3ನೇ ಪುಟಕ್ಕೆ)

## ಬೆಂಬಲ ಬೆಲೆಯಲ್ಲಿ ರಾಗಿ, ಬಿಳಿಜೋಳ ಖರೀದಿ, ರಾಗಿ ಖರೀದಿಗೆ 5 ಕೇಂದ್ರಗಳು

ದಾವಣಗೆರೆ, ಡಿ. 4 - ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ಎಫ್.ಎ.ಕ್ಯೂ ಗುಣಮಟ್ಟದ ರಾಗಿ ಮತ್ತು ಜೋಳದ ಉತ್ಪನ್ನವನ್ನು ಖರೀದಿಸಲು ಜಿಲ್ಲೆಯ 5 ಕಡೆ ಖರೀದಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದ್ದಾರೆ.



ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಟಾಸ್ಕ್ ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ರಾಗಿ ಖರೀದಿ ಕೇಂದ್ರಗಳನ್ನು ದಾವಣಗೆರೆ, ಹರಿಹರ, ಹೊನ್ನಾಳಿ, ಜಗಳೂರು ಮತ್ತು ಚನ್ನಗಿರಿ ತಾಲ್ಲೂಕು ಎಪಿಎಂಸಿ ಆವರಣದಲ್ಲಿ ಖರೀದಿ ಕೇಂದ್ರಗಳನ್ನು ತೆರೆಯಲಾಗಿದ್ದು, ರಾಗಿ ಮತ್ತು ಜೋಳ ಮತ್ತು ಮಾಲ್ದಂಡಿ ಜೋಳ ಖರೀದಿಸಲಾಗುತ್ತದೆ.

ಪ್ರತಿ ರೈತರಿಂದ ರಾಗಿಯನ್ನು ಎಕರೆಗೆ 1 ಕ್ವಿಂಟಾಲ್‌ನಂತೆ ಗರಿಷ್ಠ 20 ಕ್ವಿಂಟಾಲ್ ರಾಗಿಯನ್ನು ಕ್ವಿಂಟಾಲ್‌ಗೆ ರೂ.4290 ರಂತೆ ಮತ್ತು ಬಿಳಿ ಜೋಳ ಉತ್ಪನ್ನವನ್ನು ಪ್ರತಿ ಎಕರೆಗೆ 10 ಪ್ರತಿ ಎಕರೆಗೆ 10 ಕ್ವಿಂಟಾಲ್‌ನಂತೆ ಪ್ರತಿ ಗರಿಷ್ಠ 150 ಕ್ವಿಂಟಾಲ್‌ನಷ್ಟು ಬಿಳಿಜೋಳ ಹೈಬ್ರೀಡ್ ಕ್ವಿಂಟಾಲ್‌ಗೆ ರೂ.3371 ರಂತೆ ಹಾಗೂ ಬಿಳಿಜೋಳ ಮಾಲ್ದಂಡಿ ಜೋಳವನ್ನು ಕ್ವಿಂಟಾಲ್‌ಗೆ ರೂ.3421 ಗಳಂತೆ ಎಫ್.ಎ.ಕ್ಯೂ ಗುಣಮಟ್ಟದ ಉತ್ಪನ್ನ ಖರೀದಿಸಲಾಗುವುದು. ಜೋಳವನ್ನು ಜಿಲ್ಲೆಯಲ್ಲಿ ಹೆಚ್ಚು ಬೆಳೆಯಲಾಗುತ್ತಿಲ್ಲವಾದ್ದರಿಂದ ಖರೀದಿ ಕೇಂದ್ರಗಳನ್ನು ಇದಕ್ಕಾಗಿ ತೆರೆದಿರುವುದಿಲ್ಲ.

ರೈತರಿಂದ ರಾಗಿ ಖರೀದಿಸಲು ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮವನ್ನು ಖರೀದಿ ಏಜೆನ್ಸಿಯನ್ನಾಗಿ ನೇಮಕ ಮಾಡಲಾಗಿದೆ. ರಾಗಿ ಖರೀದಿಗೆ ಈಗಾಗಲೇ ರೈತರಿಂದ ನೋಂದಣಿಯನ್ನು ಪ್ರಾರಂಭಿಸಲಾಗಿದ್ದು 2025 ರ ಜನವರಿ 1 ರಿಂದ ಮಾರ್ಚ್ 31 ರ ವರೆಗೆ ಖರೀದಿ ಕೇಂದ್ರಗಳಲ್ಲಿ ರಾಗಿ ಖರೀದಿ ಮಾಡಲಾಗುತ್ತದೆ. ರೈತರು ಬೆಳೆ ನಮೂದಿನೊಂದಿಗೆ ಎಫ್‌ಐಡಿಯೊಂದಿಗೆ ನೋಂದಣಿ ಮಾಡಿಸಲು ತಿಳಿಸಿದ್ದಾರೆ.

## ಕಬ್ಬಿಗೆ ನ್ಯಾಯ ಮತ್ತು ಲಾಭದಾಯಕ ಬೆಲೆ ಪ್ರತಿ ಮೆಟ್ರಿಕ್ ಟನ್‌ಗೆ ರೂ.3151 ಗಳ ದರ ನಿಗದಿ

ದಾವಣಗೆರೆ, ಡಿ. 4 - ಪ್ರಸಕ್ತ ಸಾಲಿನಲ್ಲಿ ಕುಕ್ಕವಾಡದ ದಾವಣಗೆರೆ ಸಕ್ಕರೆ ಕಾರ್ಖಾನೆಯು ಸಲ್ಲಿಸಿದ ವರದಿಗಳ ಪ್ರಕಾರ ಕಳೆದ ವರ್ಷ ನುರಿಸಲಾದ ಕಬ್ಬಿನಿಂದ ಉತ್ಪಾದಿಸಲಾದ ಸಕ್ಕರೆ ಇಳುವರಿ ಆಧಾರದ ಮೇಲೆ ಮೊದಲ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯ ಮತ್ತು ಲಾಭದಾಯಕ ಬೆಲೆ ಪ್ರತಿ ಮೆಟ್ರಿಕ್ ಟನ್ ಕಬ್ಬಿಗೆ ರೂ.3151 ಗಳ ದರ ನಿಗದಿ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಜಿ.ಎಂ ತಿಳಿಸಿದ್ದಾರೆ.






# ಪಂಚಮಸಾಲಿ ಮೀಸಲಾತಿ : 10 ರಂದು ಬೆಳಗಾವಿ ಸುವರ್ಣ ಸೌಧಕ್ಕೆ ಮುತ್ತಿಗೆ

ದಾವಣಗೆರೆ, ಡಿ. 4- ಪಂಚಮಸಾಲಿ, ಮಲೇಗೌಡ, ಲಿಂಗಾಯತ ಗೌಡ, ದೀಕ್ಷಾ ಲಿಂಗಾಯತರ ಮಕ್ಕಳ ಶಿಕ್ಷಣ, ವಿದ್ಯಾರ್ಥಿ ಯುವಜನರ ಉದ್ಯೋಗಕ್ಕಾಗಿ 2 ಎ ಮೀಸಲಾತಿ ಹಾಗೂ ಲಿಂಗಾಯತ ಉಪ ಸಮಾಜಗಳಿಗೆ ಓಬಿಸಿ ಮೀಸಲಾತಿಗಾಗಿ ಒತ್ತಾಯಿಸಿ ಇದೇ ದಿನಾಂಕ 10 ರಂದು ಬೆಳಿಗ್ಗೆ 10 ಕ್ಕೆ ಬೆಳಗಾವಿ ಸುವರ್ಣ ಸೌಧ ಮುತ್ತಿಗೆ ಹಾಗೂ ರೈತರಿಂದ ಬೃಹತ್ ಟ್ರ್ಯಾಕ್ಟರ್ ರ‍್ಯಾಲಿ ಹಮ್ಮಿಕೊಳ್ಳಲಾಗಿದೆ ಎಂದು ಕೂಡಲಸಂಗಮ ಪಂಚಮಸಾಲಿ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ತಿಳಿಸಿದ್ದಾರೆ.

ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜ ಟ್ರಸ್ಟ್, ಅಖಿಲ ಭಾರತ ಲಿಂಗಾಯತ ಮಹಾಸಭಾ (ಕೂಡಲಸಂಗಮ), ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಅಡ್ವೋಕೇಟ್ ಪರಿಷತ್ತು, ರಾಷ್ಟ್ರೀಯ, ರಾಜ್ಯ, ಜಿಲ್ಲಾ ಪಂಚಸೇನಾ, ಯುವ ಘಟಕ ಚನ್ನಮ್ಮನ ಬಳಗ, ರೈತ ಘಟಕ, ವಿದ್ಯಾರ್ಥಿ ಪರಿಷತ್ ಹಾಗೂ ವಿವಿಧ ಘಟಕಗಳ ಸಹಯೋಗದಲ್ಲಿ ಬೆಳಗಾಗಿ ಸುವರ್ಣ ಸೌಧ ಮುತ್ತಿಗೆ ಹಮ್ಮಿಕೊಳ್ಳಲಾಗಿದೆ ಎಂದು ಅವರು ಹೇಳಿದರು.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಅವರ ಗೃಹ ಕಚೇರಿ ಸಭಾಂಗಣದಲ್ಲಿ ಮೊನ್ನೆ ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ 2 ಎ ಮೀಸಲಾತಿಗೆ ಆಗ್ರಹಿಸಿ, ಕಳೆದ ನಾಲ್ಕು ವರ್ಷಗಳಿಂದ ನಿರಂತರ ಮತ್ತು ಪ್ರಾಮಾಣಿಕ ಹೋರಾಟ ಮಾಡುತ್ತಾ ಬಂದಿದ್ದೇವೆ ಆದರೆ ಯಾವುದೇ ಪ್ರಯೋಜನವಾಗಿಲ್ಲ ಎಂದರು.

ಹಿಂದಿನ ಬಿಜೆಪಿ ಸರ್ಕಾರ ಕೊನೆ ಗಳಿಗೆಯಲ್ಲಿ ಮೀಸಲಾತಿ ಕುರಿತು ನಿರ್ಧಾರ ಕೈಗೊಂಡಿತ್ತಾದರೂ ಮೀಸಲಾತಿ ಪ್ರಸ್ತಾಪ ಅಲ್ಲಿಗೆ ಸ್ಥಗಿತಗೊಂಡಿತು. ಆದರೂ ಹೋರಾಟವನ್ನು ನಿಲ್ಲಿಸದೇ ನಿರಂತರಾಗಿ ನಡೆಸಿಕೊಂಡು ಬರಲಾಗುತ್ತಿದೆ. ರಾಜ್ಯ ಸರ್ಕಾರ ನಮ್ಮ ಹೋರಾಟಕ್ಕೆ ಮಾನ್ಯತೆ ನೀಡುತ್ತಿಲ್ಲ. ಮುಖ್ಯಮಂತ್ರಿ ಸಿದ್ಧರಾಮಯ್ಯ ಸಹ ಕಾಳಜಿ ವಹಿಸುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಈಗಾಗಲೇ ಹೆದ್ದಾರಿ ತಡೆದು ಪ್ರತಿಭಟನೆ ಮಾಡಿದ್ದಲ್ಲದೇ, ರಸ್ತೆಯಲ್ಲಿಯೇ ಇಷ್ಟಲಿಂಗ ಪೂಜೆ ಮೂಲಕ ವಿನೂತನ ಹೋರಾಟ ಮಾಡಿದರೂ ಪ್ರಯೋಜನವಾಗಿಲ್ಲ. ಕಾನೂನಾತ್ಮಕ ಹೋರಾಟಕ್ಕೆ ಮುಂದಾದಾಗ ಸಿಎಂ ಎರಡು ತಾಸು ಸಭೆ ನಡೆಸಿದ್ದಾರೆ. ಉಪ ಚುನಾವಣಾ ನೆಪ ಮಾಡಿಕೊಂಡು ಯಾವ ನಿರ್ಣಯ ಕೈಗೊಂಡಿಲ್ಲ ಎಂದು ಶ್ರೀಗಳು ಅಸಮಾಧಾನ ವ್ಯಕ್ತಪಡಿಸಿದರು.

ಅಂತಿಮ ಅಸ್ತ್ರವಾಗಿ ಇದೇ ದಿನಾಂಕ 10 ರಂದು ಬೆಳಿಗ್ಗೆ 10 ಗಂಟೆಗೆ ಸಮಾಜದ ಲಕ್ಷಾಂತರ ಮಂದಿ ಬೆಳಗಾವಿ ಸುವರ್ಣ ಸೌಧ ಮುತ್ತಿಗೆ ಹಾಕಲಿದ್ದಾರೆ ಎಂದು ಎಚ್ಚರಿಸಿದ ಶ್ರೀಗಳು, ಇದೇ ಸಂದರ್ಭದಲ್ಲಿ ಟ್ರ್ಯಾಕ್ಟರ್ ರ‍್ಯಾಲಿ ಕೂಡ ನಡೆಯಲಿದೆ. ನಮ್ಮ ಹೋರಾಟವನ್ನು ಹತ್ತಿಕ್ಕುವ ಪ್ರಯತ್ನ ಮಾಡುವುದಾಗಲೀ, ರ‍್ಯಾಲಿಯನ್ನು ತಡೆಯುವುದಕ್ಕೆ ಮುಂದಾದರೆ ಮುಂದಾಗುವ ಅನಾಹುತಕ್ಕೆ ಸರ್ಕಾರವೇ ನೇರ ಹೊಣೆಯಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

**ಹೋರಾಟದ ದಿಕ್ಕು ತಪ್ಪಿಸುವ ಕೆಲಸ ಯಾರೂ ಮಾಡಬಾರದು:** ಪಂಚಮಸಾಲಿ ಹೋರಾಟ ಕವಲು ದಾರಿಯಲ್ಲಿ ಹೋಗುತ್ತಿಲ್ಲ. ಹೋರಾಟದ ದಿಕ್ಕು ತಪ್ಪಿಸುವ ಕೆಲಸವನ್ನು ಯಾರೂ ಮಾಡಬಾರದು ಎಂದು ಮಾಜಿ ಶಾಸಕರೂ ಆದ ಸಮಾಜದ ಮುಖಂಡ ಹೆಚ್.ಎಸ್.ಶಿವಶಂಕರ್ ಹೇಳಿದರು.

ಸಮಾಜದ ನಾಯಕರು ಸರ್ಕಾರಕ್ಕೆ ಬಿಸಿಮುಟ್ಟಿಸುವ ಕೆಲಸ ಮಾಡಬೇಕು. ಸಮಾಜದ ಒಳಿತಿಗಾಗಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು. 2 ಎ ಮೀಸಲಾತಿ ಪಡೆಯುವುದು ಸಮಾಜದ ಎಲ್ಲರ ಮುಖ್ಯ ಉದ್ದೇಶವಾಗಿದೆ. ಹೋರಾಟದ ತೀಕ್ಷ್ಣತೆಗೆ ತಣ್ಣೀರು ಎರಚುವ ಕೆಲಸ ಮಾಡಬಾರದೆಂದು ಮನವಿ ಮಾಡಿದರು.

ಶ್ರೀಗಳು ಪೀಠ ಬಿಟ್ಟು 2 ಎ ಮೀಸಲಾತಿಯನ್ನು ಸಮಾಜಕ್ಕೆ ಕೊಡಿಸಲೇಬೇಕೆಂಬ ಛಲದಿಂದ ಹೋರಾಟಕ್ಕೆ ಟೊಂಕ ಕಟ್ಟಿ ನಿಂತಿದ್ದಾರೆ. ನಿರಂತರವಾಗಿ ಹೋರಾಟದಲ್ಲಿ ತೊಡಗಿಸಿಕೊಂಡಿದ್ದಾರೆ. ಶ್ರೀಗಳ ಬಗ್ಗೆ ಅಪನಂಬಿಕೆ ಬೇಡ. ಶ್ರೀಗಳಿಗೆ ಸಮಾಜದ ಬಗ್ಗೆ ಅಪಾರ ಕಳಕಳಿ ಇದೆ ಎಂದರು.

ಪಾಲಿಕೆ ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್ ಮಾತನಾಡಿ, ಬೆಳಗಾವಿ ಸುವರ್ಣ ಸೌಧ ಮುತ್ತಿಗೆ ಕಾರ್ಯಕ್ರಮಕ್ಕೆ ದಾವಣಗೆರೆ ಜಿಲ್ಲೆಯಿಂದಲೂ ಅಧಿಕ ಸಂಖ್ಯೆಯಲ್ಲಿ ಬರುವಂತೆ ಆಹ್ವಾನ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಸಮಾಜದ ಕಾರಿಗನೂರು ಕಲ್ಲೇಶಪ್ಪ, ಚನ್ನಬಸವನಗೌಡರು, ಮಯೂರ್, ಆನಂದ ಜಿರಲೆ, ಬಿ.ಜಿ.ಭರತ್, ಕೊಟ್ರೇಶ್, ಚಂದ್ರು, ಮಹೇಶ್ ಉಪಸ್ಥಿತರಿದ್ದರು.

## ಯುಗಮಾನೋತ್ಸವಕ್ಕೆ ರಂಭಾಪುರಿ ಜಗದ್ಗುರುಗಳಿಗೆ ಆಹ್ವಾನ



**ಹರಪನಹಳ್ಳಿ**

ಹರಪನಹಳ್ಳಿ, ಡಿ.4- ಕಟ್ಟೆಮನೆ ದೈವದವರು ಕೊಟ್ಟೂರಿನಲ್ಲಿ ನಡೆಯುವ ಯುಗಮಾನೋತ್ಸವದಲ್ಲಿ ಭಾಗವಹಿಸುವಂತೆ ರಂಭಾಪುರಿ ಜಗದ್ಗುರುಗಳನ್ನು ಆಹ್ವಾನಿಸಿದರು.

ಬರುವ ಮಾರ್ಚ್ 20 ರಿಂದ ಏಪ್ರಿಲ್ 3ನೇ ರವರೆಗೆ ನಡೆಯುವ ಆದಿ ಜಗದ್ಗುರು ಪಂಚಚಾರ್ಯ ಯುಗಮಾನೋತ್ಸವಕ್ಕೆ ರಂಭಾಪುರಿ ಶ್ರೀಗಳಿಗೆ ಕೊಟ್ಟೂರು ಕಟ್ಟೆಮನಿ ದೈವದವರಿಂದ ಭಿನ್ನವಿಸಲಾಯಿತು.

ಚಿಕ್ಕಮೇಗಳಗೆರೆಯಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಈ ಆಹ್ವಾನ ನೀಡಲಾಯಿತು. ಈ ಸಂದರ್ಭದಲ್ಲಿ ಚಾನುಕೋಟಿ ಮಠಾಧ್ಯಕ್ಷ ಡಾ. ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಕೂಡ್ಲಿಗಿ ಹಿರೇಮಠಾಧ್ಯಕ್ಷ ಪ್ರಶಾಂತ ಸಾಗರ ಶಿವಾಚಾರ್ಯ ಸ್ವಾಮೀಜಿ, ಎಂ.ಎಂ. ಜೆ. ಹರ್ಷವರ್ಧನ್, ಆರ್.ಎಂ. ಗುರು ಸ್ವಾಮಿ, ನೀಲಕಂಠಯ್ಯ, ಡಾ. ವಿಜಯ ಕುಮಾರ್ ಅಜ್ಜನಗೌಡರು, ಆರ್. ಎಂ. ಗುರು, ಮಂಜುನಾಥ ಗೌಡ್ರು, ಶಿವ ಕುಮಾರ ಗೌಡ್ರು, ಸೋಮಶೇಖರ ಗೌಡ್ರು, ಅಕ್ಷಯ ಗೌಡ, ಸತೀಶ್, ಬಂಡ್ರಿ ವೀರೇಶ್, ಮೋರಿಗೆರೆ ಪ್ರಶಾಂತ್, ಹರಪನಹಳ್ಳಿ ಗುರು ಬಸವರಾಜ್, ಡಿಶ್ ಮಂಜುನಾಥ್ ಹಾಗೂ ರಾಮಲಿಂಗೇಶ್ವರ ದೇವಸ್ಥಾನದ ದೈವಸ್ಥರು, ಚಾನುಕೋಟಿ ಮಠದ ಶ್ರೀಗಳು, ಕೂಡ್ಲಿಗಿ ಹಿರೇಮಠದ ಶ್ರೀಗಳು ಉಪಸ್ಥಿತರಿದ್ದರು.

## ಮುಖ್ಯ ಶಿಕ್ಷಕ ಸಿದ್ದಪ್ಪ ನಿವೃತ್ತಿ - ಬೀಳ್ಕೊಡುಗೆ ವಿದ್ಯಾರ್ಥಿನಿಯರಿಂದ ಪೂರ್ಣಕುಂಭ ಸ್ವಾಗತ

ಹರಿಹರ, ಡಿ.4- ನಗರದ ಹೊರವಲಯದ ಗುತ್ತೂರು ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕ ಟಿ. ಸಿದ್ದಪ್ಪನವರು ಸೇವಾ ನಿವೃತ್ತಿ ಹೊಂದಿದ ಪ್ರಯುಕ್ತ ಶಾಲೆಯಲ್ಲಿ ಬೀಳ್ಕೊಡುಗೆ ಸಮಾರಂಭವು ಸಡಗರ, ಸಂಭ್ರಮದಿಂದ ನಡೆಯಿತು.



**ಹರಿಹರ**

ವಿದ್ಯಾರ್ಥಿನಿಯರು ಮುಖ್ಯ ಶಿಕ್ಷಕ ಸಿದ್ದಪ್ಪ ಅವರ ಪತ್ನಿ ಅನಸೂಯ ಎಸ್. ಹಾಗೂ ಅವರ ಕುಟುಂಬದವರನ್ನು ಪೂರ್ಣಕುಂಭದೊಂದಿಗೆ ಸ್ವಾಗತಿಸಿ, ಸಮಾರಂಭದ ವೇದಿಕೆಗೆ ಕರೆ ತರಲಾಯಿತು. ನಂತರ ಅವರ ಕುಟುಂಬದವರಿಗೆ ಶಾಲು ಹೊದಿಸಿ ನೆನಪಿನ ಕಾಣಿಕೆಗಳನ್ನು ನೀಡಿ ಶುಭ ಕೋರಲಾಯಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕ್ಷೇತ್ರ ಶಿಕ್ಷಣಾಧಿಕಾರಿ ಡಿ. ದುರುಗಪ್ಪ ಮಾತನಾಡಿ, ಸರ್ಕಾರಿ ನೌಕರರು ಸೇವೆ ಮಾಡಿ ನಿವೃತ್ತರಾಗುವುದು ಸಹಜ, ಕೆಲವು ಸಿಬ್ಬಂದಿ ನಿವೃತ್ತರಾದರೆ ಆ ವ್ಯಕ್ತಿ ಮೊದಲು ತೊಲಗಲಿ ಎಂಬ ಭಾವನೆ ಇರುತ್ತದೆ. ಆದರೆ, ಈ ಶಾಲೆಯಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು, ಶಾಲಾಭಿವೃದ್ಧಿ ಸಮಿತಿ ಹಾಗೂ ಗ್ರಾಮಸ್ಥರೆಲ್ಲರೂ ಸೇರಿ ಭಾಗವಹಿಸಿರುವುದನ್ನು ನೋಡಿದರೆ ಸಿದ್ದಪ್ಪನವರು ಇಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ್ದಾರೆಂಬುದು ದೃಢವಾಗುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ತಾಲ್ಲೂಕು ಪಂಚಾಯ್ತಿ ಮಾಜಿ ಸದಸ್ಯ ಹಾಲೇಶ್‌ಗೌಡ್ರು ಮಾತನಾಡಿ, ಗುತ್ತೂರು ಪ್ರೌಢಶಾಲೆಯ ಶೈಕ್ಷಣಿಕ ಸಾಧನೆ ಉತ್ತಮವಾಗಿದ್ದು ಇದಕ್ಕೆ ಈ ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರು ಹಾಗೂ ಶಾಲಾಭಿವೃದ್ಧಿ ಸಮಿತಿಯವರ ಶ್ರಮವೇ ಕಾರಣವಾಗಿದೆ ಎಂದರು.

ಸಾಮಾಜಿಕ ಕಾರ್ಯಕರ್ತ ಐರಣಿ ಹನುಮಂತಪ್ಪ ಮಾತನಾಡಿ, ಗುತ್ತೂರು ಹಾಗೂ ಅಕ್ಕಪಕ್ಕದ ವಸತಿ ಪ್ರದೇಶಗಳಲ್ಲಿನ ಬಡ ವರ್ಗದವರ ಮಕ್ಕಳೇ ಈ ಶಾಲೆಯಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಬಹಳಷ್ಟು ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುತ್ತದೆ. ಆದರೆ ಈ ಶಾಲೆಯಲ್ಲಿ 250 ವಿದ್ಯಾರ್ಥಿಗಳಿರುವುದು ಶಾಲೆಯ ಶಿಕ್ಷಕರ ಶ್ರಮವನ್ನು ಬಿಂಬಿಸುತ್ತದೆ ಎಂದರು.

ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ನಾಗರಾಜ್, ಮಾಜಿ ಅಧ್ಯಕ್ಷ ಕರಿಬಸಪ್ಪ, ಸದಸ್ಯರಾದ ಪ್ರತಿಭಾ, ಹನುಮಂತಪ್ಪ, ಮುಖ್ಯ ಅಂಚೆ ಪಾಲಕ ಶ್ರೀನಿವಾಸ್‌ರಾವ್, ನಿವೃತ್ತ ತಹಶೀಲ್ದಾರ್ ಅನಂತರಾಮ ಶ್ರೇಷ್ಠಿ, ನಿವೃತ್ತ ಮುಖ್ಯ ಶಿಕ್ಷಕ ಉಮೇಶ್, ಶಿಕ್ಷಕರಾದ ಶ್ರೀಧರ್ ಮಯ್ಯ, ರವೀಂದ್ರ ಎಚ್., ನಾಗರಾಜ್ ಟಿ., ಮಂಜುನಾಥ್ ಆಡಿನ್, ರೀನಾ ಎನ್.ಎಂ., ಸರಸ್ವತಿ, ಸೌಭಾಗ್ಯ, ಶೋಭಾ ನಂದಾ, ಆರುಂಧತಿ ಹಾಗೂ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ನಾಳೆ ಶಾಲಾ ವಿದ್ಯಾರ್ಥಿಗಳಿಗೆ ಥೀಮ್ ಪಾರ್ಕ್ ಉಚಿತ ವೀಕ್ಷಣೆ

ದಾವಣಗೆರೆ, ಡಿ.4- ದಾವಣಗೆರೆ ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯದ ಆವರಣದಲ್ಲಿರುವ ಥೀಮ್ ಪಾರ್ಕ್ ಮತ್ತು ಬಯಲು ರಂಗ ಮಂದಿರ ವೀಕ್ಷಣೆಗಾಗಿ ಶಾಲಾ ವಿದ್ಯಾರ್ಥಿಗಳಿಗೆ ನಾಡಿದ್ದು ದಿನಾಂಕ 6ರಂದು ಉಚಿತ ಪ್ರವೇಶ ಅವಕಾಶ ನೀಡಲಾಗಿದೆ.

ಥೀಮ್ ಪಾರ್ಕ್ ಉದ್ಘಾಟನೆ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಪರಿನಿಬ್ಬಾಣ ದಿನದ ಪ್ರಯುಕ್ತ ಒಂದು ದಿನ ಮಾತ್ರ ಶಾಲಾ ಮಕ್ಕಳು ಥೀಮ್ ಪಾರ್ಕ್ ಅನ್ನು ಉಚಿತವಾಗಿ ವೀಕ್ಷಿಸಲು ಅವಕಾಶ ನೀಡಲಾಗಿದೆ ಎಂದು ಕುಲಪತಿ ಪ್ರೊ.ಬಿ.ಡಿ.ಕುಂಬಾರ ತಿಳಿಸಿದ್ದಾರೆ.

ಕಲೆಯಲ್ಲಿ ಅರಳಿರುವ ಗ್ರಾಮೀಣ ಸೊಗಡಿನ ಜೀವನ ಶೈಲಿ, ಕ್ರೀಡೆ, ಜಾತ್ರೆ, ಹಬ್ಬ, ಮಾರುಕಟ್ಟೆ, ಉತ್ಸವ, ಎತ್ತುಗಳ ಮಾರಾಟ ಹಾಗೂ ಇನ್ನಿತರೆ ಅಪೂರ್ಣ ಕಲಾಕೃತಿಗಳನ್ನು ವೀಕ್ಷಿಸಬಹುದಾಗಿದೆ. ಅಲ್ಲದೆ ಗ್ರೀಕ್ ವಿನ್ಯಾಸ ಶೈಲಿಯ ಬಯಲು ರಂಗ ಮಂದಿರವೂ ವಿಶೇಷ ಆಕರ್ಷಣೆಯಾಗಿದೆ. ಇವುಗಳನ್ನು ವಿದ್ಯಾರ್ಥಿಗಳು ವೀಕ್ಷಿಸಿ, ಆನಂದಿಸಬಹುದಾಗಿದೆ. ಉಳಿದ ದಿನಗಳಲ್ಲಿ ಸಾರ್ವಜನಿಕ ಪ್ರವೇಶಕ್ಕೆ ರೂ. 20 ಹಾಗೂ ಶಾಲಾ ವಿದ್ಯಾರ್ಥಿಗಳಿಗೆ ರೂ.10 ನಿಗದಿಪಡಿಸಲಾಗಿದೆ ಎಂದು ಅವರು ಹೇಳಿದ್ದಾರೆ.

## ಭಾನುವಳ್ಳಿಯಲ್ಲಿ ಇಂದು ಬಿಜೆಪಿ ಜನಾಂದೋಲನ

ರಾಜ್ಯದ ರೈತರ ಬಡ ಜನರ ಮತ್ತು ಮಠ, ಮಂದಿರಗಳ ಜಮೀನುಗಳನ್ನು ಅಕ್ರಮವಾಗಿ ವಕ್ಫ್ ಬೋರ್ಡ್ ಹೆಸರಿನಲ್ಲಿ ಕಬಳಿಸಲು ಹೊರಟಿರುವ ರಾಜ್ಯದ ಕಾಂಗ್ರೆಸ್ ಸರ್ಕಾರದ ವಿರುದ್ಧ ಬೃಹತ್ ಜನಾಂದೋಲನ ಕಾರ್ಯಕ್ರಮವು ಇಂದು ಬೆಳಿಗ್ಗೆ 9ಕ್ಕೆ ಭಾನುವಳ್ಳಿ ಗ್ರಾಮದ ನೀರಾವರಿ ಇಲಾಖೆಯ ಆವರಣದಲ್ಲಿ ನಡೆಯಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಿಧಾನಪರಿಷತ್ತು ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಮಾಜಿ ಉಪಮುಖ್ಯಮಂತ್ರಿ ಸಿ. ಅಶ್ವತ್ಥ್ ನಾರಾಯಣ, ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಜಶೇಖರ್ ನಾಗಪ್ಪ, ಮಾಜಿ ಸಚಿವ ಬಿ. ಶ್ರೀರಾಮುಲು, ಮಾಜಿ ಸಚಿವ ಎಂ. ಪಿ. ರೇಣುಕಾಚಾರ್ಯ, ಬಿಜೆಪಿ ಮುಖಂಡ ಚಂದ್ರಶೇಖರ ಪೂಜಾರ್ ಹಾಗೂ ಇತರರು ಆಗಮಿಸಲಿದ್ದಾರೆ.

## ನಗರದಲ್ಲಿ ಇಂದು ತಾಲ್ಲೂಕು ಕಸಾಪದಿಂದ ಅಕ್ಕಮಹಾದೇವಿ ಆದರ್ಶಗಳು ಕುರಿತು ದತ್ತಿ

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಬೂದಾಳ್ ರಸ್ತೆಯಲ್ಲಿನ ಹರಪನಹಳ್ಳಿ ಮುಪ್ಪಣ್ಣ ಸಿದ್ದಮ್ಮ ಪ್ರೌಢಶಾಲೆ ಆವರಣದಲ್ಲಿ ಇಂದು ಬೆಳಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಅಕ್ಕಮಹಾದೇವಿ ಆದರ್ಶಗಳು ಕುರಿತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಸದಸ್ಯ ಮಲ್ಲಿಕಾರ್ಜುನ್ ಆರ್. ಹಲಸಂಗಿ ಉಪನ್ಯಾಸ ನೀಡಲಿದ್ದಾರೆ.

ಶಾಲೆಯ ಮುಖ್ಯೋಪಾಧ್ಯಾಯ ಆಂಜನೇಯ ಜಿ. ಅಧ್ಯಕ್ಷತೆ ವಹಿಸುವರು. ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ, ನಿರ್ದೇಶಕರಾದ ಶ್ರೀಮತಿ ಕೆ.ಜಿ. ಸೌಭಾಗ್ಯ, ಆರ್. ಶಿವಕುಮಾರ್ ಮುಖ್ಯ ಅತಿಥಿಗಳಾಗಿ ಆಗಮಿಸುವರು. ತಾಲ್ಲೂಕು ಕಸಾಪ ನಿರ್ದೇಶಕ ಷಡಕ್ಷರಪ್ಪ ಎಂ. ಬೇತೂರು ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ.

**ದತ್ತಿ ದಾನಿಗಳು:** ಕಬ್ಬೂರು ಶ್ರೀಮತಿ ಕಲ್ಲಮ್ಮ ಮಂಡ್ಲೂರು ತಿಮ್ಮಪ್ಪ, ಎಂ.ಟಿ. ಜಯದೇವಪ್ಪ ಕೆ.ಬಿ. ಬಡಾವಣೆ, ದಾವಣಗೆರೆ, ಲಿಂ|| ಶ್ರೀಮತಿ ಲಿಂಗಮ್ಮ ಜಿ.ಎನ್. ಲಿಂಗಪ್ಪ ಸ್ಮಾರಕ, ಪ್ರೊ. ಜಿ.ಎನ್. ಲಿಂಗಪ್ಪ ಮತ್ತು ಮಕ್ಕಳು, ದಾವಣಗೆರೆ, ಕೆಂಚನಗೌಡರ ಶ್ರೀಮತಿ ನಾಗಮ್ಮ ಚನ್ನಬಸವನಗೌಡ, ಪ್ರೌಢಶಾಲೆ ನಿವೃತ್ತ ಮುಖ್ಯೋಪಾಧ್ಯಾಯರು ಕೆಂಚನಗೌಡ, ದಾವಣಗೆರೆ.

## ನಗರದಲ್ಲಿ ಇಂದು ವೃತ್ತಿ ನಾಟಕ ಕಂಪನಿಗಳ ಮಾಲೀಕರ ಸಭೆ

ವೃತ್ತಿ ರಂಗಭೂಮಿ ರಂಗಾಯಣ ವತಿಯಿಂದ ವೃತ್ತಿ ರಂಗಭೂಮಿ ರಂಗಾಯಣ ನಿರ್ದೇಶಕ ಮಲ್ಲಿಕಾರ್ಜುನ ಕಡಕೋಳ ಅವರ ಅಧ್ಯಕ್ಷತೆಯಲ್ಲಿ ಇಂದು ಬೆಳಿಗ್ಗೆ 11ಕ್ಕೆ ಜಿಲ್ಲಾಡಳಿತ ಭವನದಲ್ಲಿ ವೃತ್ತಿ ನಾಟಕ ಕಂಪನಿಗಳ ಮಾಲೀಕರ ಸಮಾಲೋಚನಾ ಸಭೆಯನ್ನು ಆಯೋಜಿಸಲಾಗಿದೆ.

ಸಭೆಗೆ ಜಿಲ್ಲೆಯ ವೃತ್ತಿ ನಾಟಕ ಕಂಪನಿಗಳ ಮಾಲೀಕರನ್ನು ಆಹ್ವಾನಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ತಿಳಿಸಿದ್ದಾರೆ.

## ನಗರದಲ್ಲಿ ಅಪರಿಚಿತ ವ್ಯಕ್ತಿಯ ಶವ ಪತ್ತೆ

ದಾವಣಗೆರೆ, ಡಿ.4- ನಗರದ ಕಿತ್ತೂರು ರಾಣಿ ಚನ್ನಮ್ಮ ವೃತ್ತದ ಸಮೀಪ ಪಿಸಾಳೆ ಕೌಂಪೌಂಡ್ ಹತ್ತಿರದ ಬಸ್ ಸ್ಟಾಪ್ ಸಮೀಪ ಸುಮಾರು 40 ವರ್ಷ ವಯಸ್ಸಿನ ಅಪರಿಚಿತ ಗಂಡಸಿನ ಶವ ನಿನ್ನೆ ಪತ್ತೆಯಾಗಿದೆ. ಸಾಧಾರಣ ಮೈಕಟ್ಟು, ಹಿಂದಿ ಅಕ್ಷರದಲ್ಲಿ ಸ್ಪಷ್ಟ ಹಚ್ಚೆ ಇರುತ್ತದೆ. ಕಪ್ಪು ಬಿಳಿ ಮಿಶ್ರಿತ ಕೂದಲು ಇದ್ದು, ಬಿಳಿ ಬಣ್ಣದ ಟಿ-ಶರ್ಟ್, ಹಸಿರು ಬಣ್ಣದ ಲೋಯರ್ ಧರಿಸಿರುತ್ತಾನೆ. ಹೆಚ್ಚಿನ ಮಾಹಿತಿಗಾಗಿ ಬಡಾವಣೆ ಪೊಲೀಸ್ ಠಾಣೆ (ದೂ.ಸಂ: 08192-272012, 259213) ಯನ್ನು ಸಂಪರ್ಕಿಸಬಹುದು.

## ಪದ್ಮಶಾಲಿ ಸಮಾಜ ಸೇವಾ ಸಂಘಕ್ಕೆ ನೂತನ ಪದಾಧಿಕಾರಿಗಳ ಆಯ್ಕೆ

ದಾವಣಗೆರೆ, ಡಿ. 4- ನಗರದ ಎಸ್‌ಕೆಪಿ ರಸ್ತೆಯಲ್ಲಿರುವ ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜ ಸೇವಾ ಸಂಘದ ಅಧ್ಯಕ್ಷರಾಗಿ ಬೊಮ್ಮ ತಿಪ್ಪೇಸ್ವಾಮಿ (ಎಸ್‌ಟಿಪಿ) ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಗೌರವ ಅಧ್ಯಕ್ಷರುಗಳಾಗಿ ಸೇಪೂರ್ ತಿಮ್ಮಣ್ಣ, ನ್ಯಾಯಂ ಚಂದ್ರಕಾಂತ್, ಜಕ್ಕಾ ತುಕ್ಕಪ್ಪ, ಬೊಮ್ಮ ರಾಮಜೀ, ಉಕ್ಕಡಗಾತ್ರಿ ರುದ್ರಪ್ಪ ಆಯ್ಕೆಯಾಗಿದ್ದಾರೆ.

ಪ್ರಧಾನ ಕಾರ್ಯದರ್ಶಿಯಾಗಿ ವದ್ದಿ ನರಸಿಂಹ ಮೂರ್ತಿ, ಉಪಾಧ್ಯಕ್ಷರುಗಳಾಗಿ ಅರಣಿ ನಿಂಗಪ್ಪ, ಸೇಪೂರ್ ಸತ್ಯನಾರಾಯಣ, ಸಹ ಕಾರ್ಯದರ್ಶಿಯಾಗಿ ಡಿ.ಎಸ್.ಕೆ. ಪರಶುರಾಮ ಆಯ್ಕೆಯಾಗಿದ್ದಾರೆ.

ಖಜಾಂಚಿಯಾಗಿ ಮಂಚಿ ನಾಗರಾಜ್, ಲೆಕ್ಕ ಪರಿಶೋಧಕರಾಗಿ ವಾಸಿ ರವಿಕುಮಾರ್, ಸಂಚಾಲಕರಾಗಿ ಟಿ. ಪರಶುರಾಮ್, ಸಂಘಟನಾ ಕಾರ್ಯದರ್ಶಿಯಾಗಿ ನಂದಿಗಾವಿ ಪರಶುರಾಮ್ ಆಯ್ಕೆಯಾಗಿದ್ದಾರೆ.

ಮಂಚಿ ತಿಪ್ಪೇಸ್ವಾಮಿ, ಸಂಗಿತ್ ರಮೇಶ್, ಪೊರಾಳ್ ಅಂಜಿನಪ್ಪ, ಎಸ್. ಅಣ್ಣಪ್ಪ, ಲಿಂಗಂಪಲ್ಲಿ ವೆಂಕಟೇಶ್, ಹೊಸಮನಿ ಮಂಜುನಾಥ, ನೀಲಿ ಲಕ್ಷ್ಮಣ, ಎಸ್.ಕೆ. ಬಸವರಾಜ್, ಮಂಜುನಾಥ ವಿಶ್ವನಾಥ, ಗುರುಂ ತಿಮ್ಮರಾಜು, ಮಂಚಿ ಚಂದ್ರು, ಬೊಮ್ಮ ರಂಗನಾಥ್ ಅವರುಗಳು ನಿರ್ದೇಶಕರುಗಳಾಗಿದ್ದಾರೆ.

**ಸದಸ್ಯರುಗಳು :** ಬೊಮ್ಮ ಮಧು, ಸೇಪೂರು ಸತ್ಯನಾರಾಯಣಪ್ಪ, ವಾಸಿ ಟಿ.ಎಸ್. ಗೋಪಿನಾಥ್, ಪೆದ್ದಿಪೆತಿ ಕಿರಣ್, ಮಂಜಿ ಸತೀಶ್ (ನಾರಮಂಚಿ ರಾಜು), ಸಿ.ಎ. ಕುಬೇರಪ್ಪ, ವೆದ್ದಿ ಪಿ.ಎನ್. ರಾಮು, ವಿ. ನಾರಾಯಣಸ್ವಾಮಿ, ನೀಲಿ ಎನ್.ಹೆಚ್. ಬಸವರಾಜ್.

### ಎಂ. ಹಾಲಪ್ಪ ನಿಧನ



ದಾವಣಗೆರೆ ಸಿಟಿ, 4ನೇ ಮೇನ್, 2ನೇ ಕ್ರಾಸ್, ಸ್ವಾಮಿ ವಿವೇಕಾನಂದ ಬಡಾವಣೆ ವಾಸಿ ಎಂ.ಹೆಚ್. ಶಾಂತಾರವರ ಪತಿ **ಶ್ರೀ ಎಂ. ಹಾಲಪ್ಪ (ನಿವೃತ್ತ ಎಪಿಎಂಸಿ ಕಾರ್ಯದರ್ಶಿ) (65 ವರ್ಷ)** ಇವರು ದಿನಾಂಕ 4.12.2024ರ ಬುಧವಾರ ರಾತ್ರಿ 9.30ಕ್ಕೆ ಲಿಂಗೈಕ್ಯರಾಗಿದ್ದಾರೆ. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 5.12.2024ರ ಗುರುವಾರ ಮಧ್ಯಾಹ್ನ 1 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗ, ಮೊ. : 99804 32442**

### 16ನೇ ಪುಣ್ಯಸ್ಮರಣೆ



ಶ್ರೀಮತಿ ಮಟ್ಟಿಕಲ್ ಹನುಮಮ್ಮ
ಬಿ. ರುದ್ರಪ್ಪ

*ನೀವು ನಮ್ಮನ್ನಗಲಿ ಇಂದಿಗೆ 16 ವರ್ಷಗಳು ಕಳೆದಿವೆ. ಸದಾ ತಮ್ಮ ನೆನಪಿನಲ್ಲಿ ಹಾಗೂ ತಾವು ಹಾಕಿಕೊಟ್ಟ ಹಾದಿಯಲ್ಲೇ ನಡೆಯುತ್ತಿರುವ,*

ಮಕ್ಕಳು : **ಪ್ರದೀಪ್ ಕುಮಾರ್, ರಮೇಶ್, ಶಿವಮ್ಮ (ಶೋಭ),**
ಅಳಿಯಂದಿರಾದ : **ಎಂ. ವೆಂಕೋಬಪ್ಪ**
ಮೊಮ್ಮಕ್ಕಳಾದ : **ರಶ್ಮಿ, ಅಭಿಷೇಕ್, ಪೂಜಾ ಸುಹಾಸ್, ಸುಮಂತ, ಸುಬ್ರಹ್ಮಣ್ಯ, ತಿಪ್ಪೇಸ್ವಾಮಿ,**
14ನೇ ಕ್ರಾಸ್, ವಿದ್ಯಾನಗರ, ದಾವಣಗೆರೆ.

## ಚಿನ್ನಭರಣ ದರೋಡೆ : ಮೊಬೈಲ್ ಸಮೇತ ಆರೋಪಿಗಳ ಬಂಧನ

ದಾವಣಗೆರೆ, ಡಿ. 4- ತಾಲ್ಲೂಕಿನ ಐಗೂರು ಗೊಲ್ಲರಹಟ್ಟಿ ಸಮೀಪ ಯುವಕರ ಮೇಲೆ ಹಲ್ಲೆ ನಡೆಸಿ ಹಣ, ಚಿನ್ನಾಭರಣ ದೋಚಿದ್ದ ಆರೋಪಿಗಳನ್ನು ಹೊಯ್ಸಳ ಗಸ್ತು ವಾಹನದ ಪೊಲೀಸರು ಬಂಧಿಸಿ 1ಬಳ್ಳಿ ಉಂಗುರ, 2 ಸಾವಿರ ನಗದು, ಮೊಬೈಲ್ ಫೋನ್ ವಶಪಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.



ನಗರದ ತರುಣ್, ಸಿಕಂದರ್, ಐಗೂರು ಗ್ರಾಮದ ಪ್ರಶಾಂತ್ ಬಂಧಿತ ಆರೋಪಿಗಳು. ತಾಲೂಕಿನ ಕಾಟೀಹಳ್ಳಿಯ ದಾದಾಪೀರ್ ಹಾಗೂ ಅಹಮ್ಮದ್ ಎಂಬುವರು ನ.27 ರಂದು ರಾತ್ರಿ ದಾವಣಗೆರೆಯಲ್ಲಿ ಕೆಲಸ ಮುಗಿಸಿ ಊರಿಗೆ ಮರಳುತ್ತಿದ್ದರು. ಐಗೂರು ಸಮೀಪದ ಡಾಬಾದಲ್ಲಿ ಊಟ ಮುಗಿಸಿ ವಿಶ್ರಾಂತಿ ಪಡೆಯುತ್ತಿದ್ದರು.

ಈ ವೇಳೆ ಯುವಕರನ್ನು ಬೆದರಿಸಿದ ಆರೋಪಿಗಳು ನಗದು, ಚಿನ್ನಾಭರಣ ಸುಲಿಗೆ ಮಾಡಿ ಬೈಕಿನಲ್ಲಿ ಪರಾರಿಯಾಗಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸ್ಥಳೀಯರು, ಪೊಲೀಸ್ ತುರ್ತು ಸಹಾಯವಾಣಿ 112 ಗೆ ಈ ಕುರಿತ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಧಾವಿಸಿದ 'ಹೊಯ್ಸಳ' ಗಸ್ತು ವಾಹನದ ಸಿಬ್ಬಂದಿ ಸುಲಿಗೆಕೋರರು ಹಾಗೂ ಅವರು ತೆರಳಿದ ಮಾರ್ಗದ ಬಗ್ಗೆ ಮಾಹಿತಿ ಪಡೆದು ಕಾರ್ಯಾಚರಣೆ ಆರಂಭಿಸಿದ್ದರು. ಆರೋಪಿಗಳನ್ನು 8 ಕಿ.ಮೀ. ಬೆನ್ನಟ್ಟಿದ ಪೊಲೀಸರು, ಆರ್‌ಎಂಸಿ ಠಾಣಾ ವ್ಯಾಪ್ತಿಯ ಗಾಣಗಟ್ಟೆ ಮಾಯಮ್ಮ ದೇಗುಲದ ಬಳಿ ಬಂಧಿಸಿದ್ದಾರೆ. ಬಳಿಕ ಗ್ರಾಮಾಂತರ ಠಾಣೆಯ ಪೊಲೀಸರಿಗೆ ಒಪ್ಪಿಸಿದ್ದಾರೆ.

|| ಶ್ರೀ ಉಜ್ಜಿನಿ ಮರುಳಸಿದ್ದೇಶ್ವರ ಪ್ರಸನ್ನ ||

### ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ತಾ|| ಎಲೆಬೇತೂರು ಗ್ರಾಮದ
ದಾವಣಗೆರೆ ಸಿಟಿ ವಾಸಿ
**ಬಾವಿಹಾಳ್ ಶಾಂತಮೂರ್ತಿ (ಮರಡಿ) ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 27.11.2024ನೇ ಬುಧವಾರ
ಬೆಳಗಿನಜಾವ 3.00 ಗಂಟೆಗೆ
ನನ್ನ ಧರ್ಮಪತ್ನಿಯವರಾದ
**ಶ್ರೀಮತಿ ಎಸ್.ಬಿ. ಪುಷ್ಪಲತಾರವರು (ಮರಡಿ)**
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಾಗಿ

**'ಕೈಲಾಸ ಶಿವಗಣಾರಾಧನೆ'ಯನ್ನು**

**ದಿನಾಂಕ : 05.12.2024ನೇ ಗುರುವಾರ ಬೆಳಿಗ್ಗೆ 10.30ಕ್ಕೆ ಶಾಂತಿನಗರ, ರಿಂಗ್‌ರೋಡ್, 7ನೇ ಮೇನ್, ನವೋದಯ ಸ್ಕೂಲ್ ಹತ್ತಿರ, ದಾವಣಗೆರೆಯ ನಮ್ಮ ಸ್ವಗೃಹದಲ್ಲಿ. ನೆರವೇರಿಸಲು ಗುರುಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.**

ಇಂತಿ ದುಃಖತಪ್ತರು : **ಶ್ರೀ ಬಾವಿಹಾಳ್ ಶಾಂತಮೂರ್ತಿ ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಸಹೋದರರು, ಸಹೋದರಿಯರು, ಶ್ರೀಮತಿ ಶ್ರೀಮತಿ ಶೈಲಾ, ಶ್ರೀ ಗಿರೀಶ್ ಬಾಬು ಮತ್ತು ಮಕ್ಕಳು, ಎಲೆಬೇತೂರು. ಶ್ರೀಮತಿ ಪಂಕಜಾ, ಶ್ರೀ ನಾಗರಾಜ್ ಮತ್ತು ಮಕ್ಕಳು, ಸಿರಿಗೆರೆ. ಬಾವಿಹಾಳ್ ಮರಡಿ ವಂಶಸ್ಥರು, ಎಲೆಬೇತೂರು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು**

ವಿ.ಸೂ. : ಆತ್ಮೀಯರೇ ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

### ಆರನೇ ವರ್ಷದ ಪುಣ್ಯಸ್ಮರಣೆ



**ಶ್ರೀಯುತ ಎಂ.ವಿ. ಅರುಣಕುಮಾರ್**
**(ಮುಖ್ಯಸ್ಥರು, ಗಣಕಯಂತ್ರ ವಿಭಾಗ - ಬಾಪೂಜಿ ಪಾಲಿಟೆಕ್ನಿಕ್ ವಿದ್ಯಾಸಂಸ್ಥೆ)**

ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ ಪ್ರತಿ ದಿನ, ಪ್ರತಿ ಕ್ಷಣ ನಿಮ್ಮನ್ನು ನೆನೆಯುತ್ತಾ, ನೀವು ತೋರಿದ ಅದಮ್ಮ ಪ್ರೀತಿಯನ್ನು ಸ್ಮರಿಸುತ್ತಾ, ನೀವು ಜೀವನದಲ್ಲಿ ಬದುಕಿದ ರೀತಿಯೇ ನಮಗೆ ಮಾರ್ಗದರ್ಶನ ಸದಾ ಸ್ಮರಣೆಯಲ್ಲಿರುವ.

ತಾಯಿ : **ಸುನಂದಮ್ಮ ಎಂ.ವಿ.**, ಪತ್ನಿ : **ಅಂಬಿಕಾ ಎಂ.ಎ.**, ಮಗಳು : **ಅರ್ಪಿತಾ ಎಂ.ಎ.**,
ಅಕ್ಕ-ಭಾವಂದಿರು : **ಶ್ರೀಮತಿ ನಾಗಶ್ರೀ ಶ್ರೀ ಉಮೇಶ್ ಹಾಗೂ ಶ್ರೀಮತಿ ಜಯಶ್ರೀ ಶ್ರೀ ಅಶೋಕ್‌ರವರು,**
ಸೊಸೆ-ಅಳಿಯ : **ಅಪೂರ್ವ ಮತ್ತು ಅಕ್ಷಯ್**

### ಶ್ರೀಮತಿ ನಂದಾ ಪ್ರಭುಸ್ವಾಮಿ ನಿಧನ



ದಾವಣಗೆರೆ ಎಂ.ಸಿ.ಸಿ. 'ಎ'. ಬ್ಲಾಕ್, 12ನೇ ಮೇನ್, # 3714/145 ವಾಸಿ ಚೌಕೀಪೇಟೆ ಶ್ರೀ ಸಿದ್ದಲಿಂಗೇಶ್ವರ ಎಂಟರ್ ಪ್ರೈಸಸ್ ಮಾಲೀಕ ಶ್ರೀ ಕೊಳಹಾಳು ಮಠದ ಪ್ರಭುಸ್ವಾಮಿಯವರ ಪತ್ನಿ ಶ್ರೀಮತಿ ನಂದಾ ಪ್ರಭುಸ್ವಾಮಿ (58) ಅವರು ದಿನಾಂಕ 03.12.2024ರಂದು ಮಂಗಳವಾರ ಬೆಳಗಿನಜಾವ 3 ಗಂಟೆಗೆ ಲಿಂಗೈಕ್ಯರಾದರು. ಪತಿ, ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಲಿಂಗೈಕ್ಯರ ಅಂತ್ಯಕ್ರಿಯೆಯನ್ನು ದಿನಾಂಕ 5.12.2024ರ ಗುರುವಾರ ಮಧ್ಯಾಹ್ನ 11.30 ಗಂಟೆಗೆ ಗ್ಲಾಸ್ ಹೌಸ್ ಪಕ್ಕದಲ್ಲಿರುವ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

## ಚನ್ನಗಿರಿ : ಸುಪಾರಿ ಕೊಲೆಗಾರರ ಬಂಧನ

ದಾವಣಗೆರೆ, ಡಿ. 4- ಆಸ್ತಿಗಾಗಿ ಸಂಚು ರೂಪಿಸಿ ಸುಪಾರಿ ನೀಡಿ ತನ್ನ ಚಿಕ್ಕಪ್ಪನನ್ನೇ ಕೊಲೆ ಮಾಡಿಸಿದ ಆರೋಪಿತರು ಮತ್ತು ಸುಪಾರಿ ಕೊಲೆಗಾರರನ್ನು ಚನ್ನಗಿರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಲ್ಲೂರು ಭದ್ರಾ ಉಪ ನಾಲೆಯಲ್ಲಿ ನ.22 ರಂದು ಅಪರಿಚಿತ ವ್ಯಕ್ತಿಯ ಶವ ಅನುಮಾನಸ್ಪಾದ ರೀತಿಯಲ್ಲಿ ಪತ್ತೆಯಾಗಿತ್ತು. ದಾವಣಗೆರೆ ತಾಲ್ಲೂಕು ಗೋಪನಾಳ್ ಗ್ರಾಮದ ಸಿದ್ದಲಿಂಗಪ್ಪ ಎಂದು ಗುರುತಿಸಲಾಗಿತ್ತು.

ಸಿದ್ದಲಿಂಗಪ್ಪನ ಕೊಲೆಯಾಗಿರುವ ಶಂಕೆಯಿದೆ ಎಂದು ಸೊಸೆ ದೊಡ್ಡಮ್ಮ ದೂರು ನೀಡಿದ್ದರು. ಪ್ರಕರಣದ ಪತ್ತೆಗಾಗಿ ಎಸ್ಪಿ ಉಮಾ ಪ್ರಶಾಂತ್, ಎಎಸ್ಪಿಗಳಾದ ಸಂತೋಷ ವಿಜಯಕುಮಾರ್, ಮಂಜುನಾಥ ಮಾರ್ಗದರ್ಶನದಲ್ಲಿ, ಚನ್ನಗಿರಿ ಡಿವೈಎಸ್ಪಿ ಸ್ಯಾಮ್ ವರ್ಗೀಸ್‌ರವರ ನೇತೃತ್ವದಲ್ಲಿ ಚನ್ನಗಿರಿ ಪೊಲೀಸ್ ಠಾಣೆಯ ಅಧಿಕಾರಿ ಸಿಬ್ಬಂದಿಗಳ ತಂಡ ರಚನೆ ಮಾಡಲಾಗಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಗೋಪನಾಳ ಗ್ರಾಮದ ಸತೀಶ, ಪ್ರಭು, ಪ್ರಶಾಂತ, ಸುಜಾತ, ಶಿವಮೂರ್ತೆಪ್ಪ ಇವರನ್ನು ವಿಚಾರಣೆಗೆ ಒಳಪಡಿಸಿದಾಗ ಆಸ್ತಿ ಹಾಗೂ ಜಾಗದ ವಿಚಾರವಾಗಿ ಸಿದ್ದಲಿಂಗಪ್ಪನನ್ನು ಕೊಲೆ ಮಾಡಲು 1 ಲಕ್ಷ ರೂಪಾಯಿ ಸುಪಾರಿ ನೀಡಿದ್ದು, ಅದರಂತೆ ನ.21 ರಂದು ಸಂಜೆ ಸಿದ್ದಲಿಂಗಪ್ಪನನ್ನು ಬೋರ್ ಪಾಯಿಂಟ್ ಮಾಡಿಸಬೇಕಾಗಿದೆ ಎಂದು ತೊಗಲೇರಿ ಕ್ರಾಸ್‌ನಿಂದ ಆಟೋದಲ್ಲಿ ಚನ್ನಗಿರಿ ತಾಲ್ಲೂಕು ಹೊನ್ನೆಬಾಗಿ ಸಮೀಪದ ನಿರ್ಜನ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಸಿದ್ದಲಿಂಗಪ್ಪನನ್ನು ಟವೆಲ್‌ನಿಂದ ಕುತ್ತಿಗೆಗೆ ಬಿಗಿದು ಉಸಿರುಗಟ್ಟಿಸಿ ಕೊಲೆ ಮಾಡಿ, ಶವವನ್ನು ನಲ್ಲೂರು ಸಮೀಪದ ಭದ್ರಾ ಚಾನಲ್ ಗೆ ತಂದು ಶವಕ್ಕೆ ಕಲ್ಲು ಕಟ್ಟಿ ನೀರಿಗೆ ಹಾಕಿರುವುದಾಗಿ ತಿಳಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

# ಅನುದಾನಿತ ಶಿಕ್ಷಕರ ಹಿತಕ್ಕಾಗಿ ಅಧಿವೇಶನದಲ್ಲಿ ದನಿ ಎತ್ತುವೆ

## 'ವಿಭಾಗೀಯ ಮಟ್ಟದ ಸಮಾವೇಶದಲ್ಲಿ' ಚನ್ನಗಿರಿ ಶಾಸಕ ಬಸವರಾಜ್ ವಿ. ಶಿವಗಂಗಾ ಭರವಸೆ

ದಾವಣಗೆರೆ, ಡಿ.4- ಅನುದಾನಿತ ಪಿಯು ಕಾಲೇಜುಗಳ ಉಪನ್ಯಾಸಕರಿಗೆ ಕಗ್ಗಂಟಾಗಿರುವ ಕಾರ್ಯ ಭಾರ ಸಮಸ್ಯೆ ಹಾಗೂ ಸೇವಾ ವಿಮುಕ್ತಿ ಆದೇಶದಿಂದಾಗು ತ್ತಿರುವ ತೊಂದರೆಯನ್ನು ಅಧಿವೇಶನದಲ್ಲಿ ಪ್ರಸ್ತಾಪಿಸಿ ಅನುದಾನಿತ ಶಿಕ್ಷಕರ ಹಿತ ಕಾಪಾಡಲಿದ್ದೇನೆ ಎಂದು ಶಾಸಕ ಬಸವರಾಜ್ ವಿ. ಶಿವಗಂಗಾ ಭರವಸೆ ನೀಡಿದರು.



ರಾಜ್ಯ ಅನುದಾನಿತ ಪದವಿ ಪೂರ್ವ ಕಾಲೇಜುಗಳ ನೌಕರರ ಸಂಘದಿಂದ ನಗರದ ಅಥಣಿ ಪಿಯು ಕಾಲೇಜಿನ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಜಿಲ್ಲಾ ಘಟಕದ ಉದ್ಘಾಟನೆ ಹಾಗೂ ವಿಭಾಗೀಯ ಮಟ್ಟದ ಸಮಾವೇಶದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಕೆಲವು ದಿನಗಳ ಹಿಂದೆ ಅನುದಾನಿತ ನೌಕರರ ತಂಡ ನನ್ನ ಬಳಿ ಬಂದು ತಮ್ಮ ಅಳಲು ತೊಡಿಕೊಂಡಾಗ, ನಾನು ತಕ್ಷಣಕ್ಕೆ ಸಚಿವ ಮಧು ಬಂಗಾರಪ್ಪ ಅವರಿಗೆ ಕರೆ ಮಾಡಿ, ಉಪನ್ಯಾಸಕರಿಗಾಗುವ ತೊಂದರೆ ಬಗ್ಗೆ ತಿಳಿಸಿದ ಕೂಡಲೇ ಅವರು ಮೌಖಿಕವಾಗಿ ಆದೇಶ ಹಿಂಪಡೆದಿದ್ದಾರೆ ಎಂದು ಹೇಳಿದರು.

ಕುಟುಂಬಗಳಿಗೆ ಆಸರೆಯಾಗಿರುವ ಶಿಕ್ಷಕರ ಬದುಕಿಗೆ ತೊಂದರೆ ಆಗದಂತೆ ನೋಡಿಕೊಳ್ಳುವ ಹೊಣೆ ನಮ್ಮ ಮೇಲಿದೆ. ಈ ಸಮಸ್ಯೆಯನ್ನು ಪರಿಹರಿಸುವ ಸಂಪೂರ್ಣ ಜವಾಬ್ದಾರಿ ತೆಗೆದುಕೊಳ್ಳುತ್ತೇವೆ ಎಂದರು.

ಉಪನ್ಯಾಸಕರ ವೇತನದಲ್ಲಿ ವಿಳಂಬ ಆಗುತ್ತಿರುವುದನ್ನು ಸರಿಪಡಿಸುವಂತೆ ತಿಳಿಸಿದ್ದೇನೆ. ಈ ನಿಟ್ಟಿನಲ್ಲಿ ಶಿಕ್ಷಕರ ಯಾವುದೇ ಸಮಸ್ಯೆಗಳಿದ್ದರೂ ವಿದ್ಯಾರ್ಥಿಯಾಗಿ ಅವರ ಸಮಸ್ಯೆಗೆ ಸ್ಪಂದಿಸುತ್ತೇನೆ ಎಂದು ಶಾಸಕರು ತಿಳಿಸಿದರು.

ವಿಧಾನ ಪರಿಷತ್ ಸದಸ್ಯ ಡಿ.ಟಿ. ಶ್ರೀನಿವಾಸ್ ಮಾತನಾಡಿ, ಕಾರ್ಯಭಾರ ಹಾಗೂ ಸೇವಾ ವಿಮುಕ್ತಿ ಸುತ್ತೋಲೆ ಬಗ್ಗೆ ಆತಂಕ ಪಡಬೇಡಿ. ಈ ಆದೇಶದಿಂದ ಆಗುವ ಸಮಸ್ಯೆಯನ್ನು ಸಿಎಂ ಸಿದ್ದರಾಮಯ್ಯನವರ ಗಮನಕ್ಕೆ ತರುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಆಶ್ವಾಸನೆ ನೀಡಿದರು. ಮೇಲ್ಮಟ್ಟದ ಅಧಿಕಾರಿಗಳು ದಿಢೀರನೆ ಆಘಾತಕಾರಿ ಸುತ್ತೋಲೆ ಹೊರಡಿಸುವುದು ಸೂಕ್ತವಲ್ಲ.

ಆದೇಶದಲ್ಲಿನ ನಿರ್ಧಾರಗಳು ಮಾನವೀಯತೆ ಯಿಂದ ಕೂಡಿರಬೇಕು. ಏಕಾ-ಏಕಿ ಆದೇಶದಲ್ಲಿ ವಿಮುಕ್ತಿಗೊಳಿಸುವಂತಹ ಅಂಶಗಳನ್ನು ಉಲ್ಲೇಖಿಸುವುದು ಸಮಾಜಕ್ಕೆ ಉತ್ತಮ ಸಂದೇಶವಲ್ಲ ಎಂದರು.

ಯಾವುದೇ ಆದೇಶ ಹೊರಡಿಸುವಾಗ ಅದರ ಸಾಧಕ-ಬಾಧಕಗಳ ಬಗ್ಗೆ ಚರ್ಚಿಸದಿದ್ದರೆ ಅದು ಕಾರ್ಯಸಿದ್ಧಿ ಆಗುವುದಿಲ್ಲ. ಇಂತಹ ಆಘಾತಕಾರಿ ಸುತ್ತೋಲೆ ಹೊರಡಿಸುವವರ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಎಲ್ಲಿ ವ್ಯತ್ಯಾಸ ಹಾಗೂ ತಾರತಮ್ಯಗಳು ಕಂಡು ಬರುತ್ತವೋ ಅಲ್ಲಿ ಕ್ರಾಂತಿ ಪ್ರಾರಂಭವಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ಸುಗಮವಾದ ವಾತಾವರಣ ಸೃಷ್ಟಿಸುವುದು ಉತ್ತಮ ಎಂದರು.

ಇದೇ ವೇಳೆ ಸಂಘಟನೆಯ ರಾಜ್ಯಾಧ್ಯಕ್ಷ ಡಾ.ಎನ್. ಹರೀಶ್ ಹಕ್ಕೊತ್ತಾಯಗಳನ್ನು ಮಂಡಿಸುವ ಜತೆಗೆ ಶಾಸಕರಿಗೆ ಮನವಿ ಸಲ್ಲಿಸಿದರು.

ಸಂಘಟನೆಯ ಕಾರ್ಯಾಧ್ಯಕ್ಷ ಎಂ.ಎಸ್. ಆನಂದಕರ್, ಪ್ರಧಾನ ಕಾರ್ಯದರ್ಶಿ ಎಂ. ಆನಂದ, ಕೋಶಾಧ್ಯಕ್ಷ ಬಿ.ಎಸ್. ಉಮೇಶ್, ಪದವಿ ಪೂರ್ವ ಡಿಡಿಪಿ ಎಸ್.ಜಿ. ಕರಿಸಿದ್ದಪ್ಪ, ಎಸ್.ಆರ್. ತಿಪ್ಪೇಸ್ವಾಮಿ, ಬಿ.ಎಲ್. ಯಶವಂತ ಕುಮಾರ್, ಪಿ.ಎಂ. ಪ್ರದೀಪ್ ಕುಮಾರ್, ಎಸ್.ಜಿ. ನಾಗರಾಜ್, ಎಂ.ಸಿ.ವೈ ಮಂಜುನಾಥ್, ಹೆಚ್. ಚಂದ್ರಪ್ಪ, ಜೆ. ಶಿವಪ್ಪ, ಲೋಹಿತ್ ಇತರರು ಇದ್ದರು.

# ನದಿಯಲ್ಲಿ ಗಂಡನನ್ನು ಮುಳುಗಿಸಿ ಕೊಂದಿದ್ದ ಪತ್ನಿ : ಬಯಲಾದ ಕೃತ್ಯ

ಬೆಳಗಾವಿ, ಡಿ.4- 11 ತಿಂಗಳ ಹಿಂದೆ ಅಥಣಿ ತಾಲ್ಲೂಕು ವ್ಯಾಪ್ತಿಯಲ್ಲಿ ಕೃಷ್ಣಾ ನದಿಯಲ್ಲಿ ವ್ಯಕ್ತಿಯೊಬ್ಬರನ್ನು ಮುಳುಗಿಸಿ ಕೊಲೆ ಮಾಡಿದ ಪ್ರಕರಣವನ್ನು ಭೇದಿಸುವಲ್ಲಿ ಹಾರೂಗೇರಿ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಮೃತನ ಪತ್ನಿ, ಅವಳ ಪ್ರಿಯಕರ ಸೇರಿ ಮೂವರನ್ನು ಹಾರೂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

2023ರ ಡಿಸೆಂಬರ್ 27ರಂದು ಕೃಷ್ಣಾ ನದಿಯಲ್ಲಿ ಅಪರಿಚಿತ ವ್ಯಕ್ತಿ ಶವ ಪತ್ತೆಯಾಗಿತ್ತು. ಈ ಮಧ್ಯೆ, ರಾಯಬಾಗ ತಾಲ್ಲೂಕಿನ ಇಟನಾಳದಲ್ಲಿ ಯುವಕ ನೊಬ್ಬ ಕಾಣೆಯಾಗಿರುವ ವಿಷಯ ತಿಳಿಯಿತು. ಆದರೆ, ಕಾಣೆಯಾಗಿರುವ ಬಗ್ಗೆ ಸಂಬಂಧಿಸಿದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿರಲಿಲ್ಲ ಎಂದು ಎಂದು ಎಸ್‌ಪಿ ಡಾ.ಭೀಮಾಶಂಕರ ಗುಳೇದ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

ಶವ ಪತ್ತೆ ಜಾಡು ಹಿಡಿದು, ತನಿಖೆ ಕೈಗೊಂಡಾಗ, ನದಿಯಲ್ಲಿ ಮೃತ ಪಟ್ಟಿದ್ದು ಮಲ್ಲಪ್ಪ ಕಂಬಾರ ಎಂದು ಗೊತ್ತಾಯಿತು. ಮಲ್ಲಪ್ಪ ಅವರ ಪತ್ನಿ ದಾನವ್ವ, ಅವಳ ಪ್ರಿಯಕರ ಪ್ರಕಾಶ ಬೆನ್ನಾಳಿ, ರಾಮಪ್ಪ ಮಾದರ ನದಿಯಲ್ಲಿ ಮಲ್ಲಪ್ಪನನ್ನು ಮುಳುಗಿಸಿ ಕೊಲೆ ಮಾಡಿರುವುದು ತನಿಖೆಯಲ್ಲಿ ದೃಢಪಟ್ಟಿದೆ ಎಂದು ತಿಳಿಸಿದರು.

ಒಂದೂವರೆ ವರ್ಷದ ಹಿಂದೆ ದಾನವ್ವ ಕಾಣೆಯಾದ ಕುರಿತು ಅವರ ತಂದೆ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ದಾನವ್ವ ಪ್ರಕಾಶ ಬೆನ್ನಾಳಿ ಜತೆ ಓಡಿಹೋಗಿದ್ದು ಪತಿ ಮಲ್ಲಪ್ಪ ಅವರಿಗೆ ತಿಳಿಯಿತು. ಕೆಲ ದಿನಗಳ ನಂತರ ದಾನವ್ವ ಮನೆಗೆ ವಾಪಸ್ ಆಗಿದ್ದರು. ಓಡಿ ಹೋಗಿದ್ದ ವಿಚಾರಕ್ಕೆ ಮನೆಯಲ್ಲಿ ದಂಪತಿ ಮಧ್ಯೆ ಪ್ರತಿದಿನವೂ ಗಲಾಟೆಯಾಗುತ್ತಿತ್ತು. ಪತ್ನಿಯ ಸಹವಾಸ ಬಿಡುವಂತೆ ಪ್ರಕಾಶನಿಗೆ ಮಲ್ಲಪ್ಪ ಎಚ್ಚರಿಕೆ ಕೊಟ್ಟಿದ್ದರು. ಹಾಗಾಗಿ ದಾನವ್ವ ಮತ್ತು ಪ್ರಕಾಶನು ರಾಮಪ್ಪ ಎಂಬುವನ ನೆರವಿನಿಂದ ಕಳೆದ ಡಿಸೆಂಬರ್‌ನಲ್ಲಿ ಮಲ್ಲಪ್ಪನನ್ನು ಕೊಲೆ ಮಾಡಿದ್ದಾರೆ ಎಂದು ವಿವರಿಸಿದ್ದಾರೆ.

# ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ ಮೂವರ ಸೋಲಿಗೆ ಜಿ.ಎಂ.ಸಿದ್ದೇಶ್ವರ ಕಾರಣ

**ಚನ್ನಗಿರಿ ಬಿಜೆಪಿ ಮುಖಂಡ ಮಾಡಾಳು ಮಲ್ಲಿಕಾರ್ಜುನ್ ಆರೋಪ**

ದಾವಣಗೆರೆ, ಡಿ.4- ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ ಮೂರು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಸೋಲಲು ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಅವರೇ ಪ್ರಮುಖ ಕಾರಣ ಎಂದು ಚನ್ನಗಿರಿ ಬಿಜೆಪಿ ಮುಖಂಡ ಮಾಡಾಳು ಮಲ್ಲಿಕಾರ್ಜುನ್ ಆರೋಪಿಸಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್‌ನ ಮೂವರು ಅಭ್ಯರ್ಥಿಗಳಿಗೆ ಹಣ ನೀಡಿ ಬಿಜೆಪಿ ಅಭ್ಯರ್ಥಿ ಗಳನ್ನು ಸೋಲಿಸಿದ್ದಾರೆ. ಈ ಕುರಿತ ದಾಖಲೆಗಳು ತಮ್ಮ ಬಳಿ ಇವೆ. ಸೂಕ್ತ ಸಮಯದಲ್ಲಿ ಪಕ್ಷದ ಹೈಕಮಾಂಡಿಗೆ ದಾಖಲೆಗಳನ್ನು ಸಲ್ಲಿಸಲಾಗುವುದು ಎಂದು ಹೇಳಿದರು.

ಸಿದ್ದೇಶ್ವರ ಅವರು ಹಣ ಮತ್ತು ಬೆಂಬಲ ನೀಡಿರುವ ಕುರಿತಂತೆ ಸೂಕ್ತ ದಾಖಲಾತಿಗಳು ನಮ್ಮ ಬಳಿ ಇದೆ. ಸಮಯ ಬಂದಾಗ ಬಿಡುಗಡೆ ಮಾಡುತ್ತೇವೆ ಎಂದ ಅವರು, ಇಂಥವರ ವಿರುದ್ಧ ಏಕೆ ಕ್ರಮವಿಲ್ಲ ಎಂದು ಪ್ರಶ್ನಿಸಿದರು.

ಪಕ್ಷ ವಿರೋಧಿ ಚಟುವಟಿಕೆ ನಡೆಸಿರುವ ಕುರಿತಂತೆ ಹೈಕಮಾಂಡ್ ಕೇಳಿದರೆ ಸೂಕ್ತ ದಾಖಲಾತಿಗಳು, ಸಾಕ್ಷ್ಯಗಳನ್ನು ನೀಡುತ್ತೇವೆ. ಗಾಳಿ ಯಲ್ಲಿ ಗುಂಡು ಹೊಡೆಯುವ ಕೆಲಸ ಮಾಡುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ರಾಜ್ಯದಲ್ಲಿ ಬಿಜೆಪಿ ಸೋಲಲು ಕಾರಣ ಸಿದ್ದೇಶ್ವರ, ಬಿ.ಪಿ.ಹರೀಶ್ ಅವರಂಥ ನಾಲ್ಕೈದು ನಾಯಕರೇ ಕಾರಣ. ಒಡೆದು ಆಳಬೇಕೆಂಬ ಉದ್ದೇಶದಿಂದ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದನ್ನು ತಡೆದರು. ದುಡ್ಡು, ಅಧಿಕಾರ, ದುರಹಂಕಾರದಿಂದಾಗಿ ಬಿಜೆಪಿ ಕೇವಲ 66 ಸ್ಥಾನಗಳನ್ನು ಪಡೆಯಬೇಕಾಯಿತು ಎಂದರು.

ಲೋಕಾಯುಕ್ತ ಪ್ರಕರಣದಲ್ಲಿ ತನ್ನ ತಂದೆ ಮಾಡಾಳ್ ವಿರೂಪಾಕ್ಷಪ್ಪ ಶಾಸಕರಾಗಿದ್ದಾಗ ಬಂಧನಕ್ಕೊಳಗಾಗಲು ಜಿ.ಎಂ.ಸಿದ್ದೇಶ್ವರ ಮಾಡಿದ ಪಿತೂರಿಯೇ ಕಾರಣ. ಕೇವಲ ಚುನಾವಣೆ ವೇಳೆ ಮಾತ್ರವಲ್ಲ, ಎರಡು ವರ್ಷಗಳ ಹಿಂದಿನಿಂದಲೂ ಪಿತೂರಿ ಮಾಡಿದ್ದರು ಎಂದು ಆರೋಪಿಸಿದರು.

ಯಡಿಯೂರಪ್ಪನವರ ಕುಟುಂಬದ ಬಗ್ಗೆ ಮಾತನಾಡುವ ಮೂಲಕ ಬಿ.ಪಿ.ಹರೀಶ್ ಜ್ಯೂನಿಯರ್ ಯತ್ನಾಳ್ ಆಗಲು ಹೊರಟಿದ್ದಾರೆ ಎಂದು ಮಲ್ಲಿಕಾರ್ಜುನ್ ಕಿಡಿಕಾರಿದರು.

ಬಿಜೆಪಿ ಮುಖಂಡರಾದ ಚಂದ್ರಶೇಖರ್ ಪೂಜಾರ್, ಪ್ರವೀಣ್, ರಾಜು ವೀರಣ್ಣ, ಚಂದ್ರು, ಮಲ್ಲಿಕಾರ್ಜುನ್ ಪಟ್ಲೆ, ಮಂಜು, ನಾಗರಾಜ್, ಸುಮಂತ್ ಮತ್ತಿತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.


# ಶಿವ ಸಹಕಾರಿ ಬ್ಯಾಂಕ್ ನಿಯಮಿತ,

ಆಡಳಿತ ಕಛೇರಿ ಮತ್ತು ಪ್ರಧಾನ ಕಛೇರಿ : ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ-577 001. ಫೋ.ನಂ. 08192-256107

## ಬ್ಯಾಂಕಿನ ಸದಸ್ಯರ ಗಮನಕ್ಕೆ

ದಿನಾಂಕ: 22-12-2024ರಂದು ನಡೆಸಲಾಗುವ ಬ್ಯಾಂಕಿನ ಆಡಳಿತ ಮಂಡಲಿ ನಿರ್ದೇಶಕರ ಚುನಾವಣೆಗೆ ಸಂಬಂಧಪಟ್ಟಂತೆ ರಿಟರ್ನಿಂಗ್ ಅಧಿಕಾರಿಯವರು ತಯಾರಿಸಿದ ಚುನಾವಣಾ ವೇಳಾಪಟ್ಟಿ ಮತ್ತು ಸೂಚನೆಗಳನ್ನು ಅರ್ಹ ಮತದಾರ ಸದಸ್ಯರುಗಳಿಗೆ ಅಂಚೆ ಮೂಲಕ ದಿನಾಂಕ: 04-12-2024ರಂದು ಜಾರಿ ಮಾಡಲಾಗಿರುತ್ತದೆ. ಈಗಾಗಲೇ ಅರ್ಹ ಮತದಾರರ ಪಟ್ಟಿಯನ್ನು ಮತ್ತು ಚುನಾವಣಾ ನೋಟಿಸನ್ನು ಬ್ಯಾಂಕಿನ ಆಡಳಿತ ಕಛೇರಿ ಮತ್ತು ಪ್ರಧಾನ ಕಛೇರಿಯಲ್ಲಿ ಪ್ರಕಟಿಸಲಾಗಿದೆ.

**ಬ್ಯಾಂಕಿನಿಂದ ನೀಡಲ್ಪಟ್ಟ ಭಾವಚಿತ್ರಗಳನ್ನೊಳಗೊಂಡ ಗುರುತಿನ ಚೀಟಿಯನ್ನು ಮತದಾನದ ವೇಳೆಯಲ್ಲಿ ಹಾಜರುಪಡಿಸುವುದು ಕಡ್ಡಾಯವಾಗಿರುತ್ತದೆ. ಆದ್ದರಿಂದ ಮತದಾನ ಮಾಡಲು ಅನುಕೂಲವಾಗುವಂತೆ ಗುರುತಿನ ಚೀಟಿ ಪಡೆಯದೇ ಇರುವ ಬ್ಯಾಂಕಿನ ಸದಸ್ಯರು ತಮ್ಮ ವಿಳಾಸ ದೃಢೀಕರಣದೊಂದಿಗೆ ಇತ್ತೀಚಿನ 3 ಪಾಸ್ ಪೋರ್ಟ್ ಅಳತೆಯ ಭಾವಚಿತ್ರಗಳನ್ನು ಪ್ರಧಾನ ಕಛೇರಿಯಲ್ಲಿ ಸಲ್ಲಿಸಿ, ಗುರುತಿನ ಚೀಟಿ ಪಡೆಯುವುದು.**

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ

ಸ್ಥಳ: ದಾವಣಗೆರೆ.
ದಿನಾಂಕ: 05.12.2024

**ಪ್ರಭಾರಿ ಪ್ರಧಾನ ವ್ಯವಸ್ಥಾಪಕರು,** ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ.


# ಇಂದು ಮಹರಾಷ್ಟ್ರ ಸಿಎಂ ಆಗಿ ಫಡ್ನವೀಸ್ ಪ್ರಮಾಣ ವಚನ

ಮುಂಬೈ, ಡಿ.4- ವಿಧಾನಸಭೆ ಚುನಾ ವಣೆಯ ಫಲಿತಾಂಶ ಪ್ರಕಟವಾಗಿ ಸುಮಾರು ಎರಡು ವಾರಗಳ ನಂತರ ಮಹಾರಾಷ್ಟ್ರದಲ್ಲಿ ನೂತನ ಸರ್ಕಾರ ರಚನೆಯಾಗುತ್ತಿದೆ.



ಬುಧವಾರ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ದೇವೇಂದ್ರ ಫಡ್ನವೀಸ್ ಅವರು ಏಕನಾಥ್ ಶಿಂಧೆ ಮತ್ತು ಅಜಿತ್ ಪವಾರ್ ಅವರೊಂದಿಗೆ ಮಹಾರಾಷ್ಟ್ರ ರಾಜ್ಯಪಾಲ ಸಿ.ಪಿ. ರಾಧಾಕೃಷ್ಣನ್ ಅವರನ್ನು ಭೇಟಿಯಾಗಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದ್ದಾರೆ.

ಇಂದು ಬಿಜೆಪಿ ಶಾಸಕಾಂಗ ಪಕ್ಷದ ಸಭೆಯ ನಂತರ ದೇವೇಂದ್ರ ಫಡ್ನವಿಸ್ ಅವರು ರಾಜ್ಯಪಾಲ ರನ್ನು ಭೇಟಿಯಾದರು. ಅವರಿಗೆ ಹಂಗಾಮಿ ಮುಖ್ಯ ಮಂತ್ರಿ ಏಕನಾಥ್ ಶಿಂಧೆ ಮತ್ತು ಎನ್‌ಸಿಪಿ ನಾಯಕ ಅಜಿತ್ ಪವಾರ್ ಅವರು ಸಾಥ್ ನೀಡಿದರು.

ಸರ್ಕಾರ ರಚನೆಗೆ ಹಕ್ಕು ಮಂಡಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಫಡ್ನವಿಸ್, ನಾವು ಮೂವರೂ ಸರ್ಕಾರವನ್ನು ನಡೆಸುತ್ತೇವೆ ಎಂದು ಹೇಳಿದರು.

ಸಿಎಂ ಮತ್ತು ಡಿಸಿಎಂ ಹುದ್ದೆಗಳು ಕೇವಲ ತಾಂತ್ರಿಕ ಹುದ್ದೆಗಳು ಅಷ್ಟೆ. ನಾವೆಲ್ಲರೂ ಮಹಾರಾಷ್ಟ್ರಕ್ಕಾಗಿ ಒಟ್ಟಾಗಿ ಕೆಲಸ ಮಾಡುತ್ತೇವೆ. ಮುಂಬರುವ ಸಭೆಗಳಲ್ಲಿ ಇತರ ಸಚಿವರನ್ನು ನಿರ್ಧರಿಸಲಾಗುವುದು ಎಂದರು.

ನಾವು ರಾಜ್ಯಪಾಲರನ್ನು ಭೇಟಿ ಮಾಡಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದ್ದೇವೆ ಮತ್ತು ಮೂರು ಪಕ್ಷಗಳ ಶಾಸಕ ಬೆಂಬಲ ಪತ್ರವನ್ನು ನೀಡಿದ್ದೇವೆ. ನಾನು ಮಹಾಯುತಿ ಸರ್ಕಾರದ ಮುಖ್ಯಮಂತ್ರಿ ಆಗಿ ಪ್ರಮಾಣ ವಚನ ಸ್ವೀಕರಿಸಬೇಕು ಎಂದು ನಮ್ಮ ಮಿತ್ರ ಪಕ್ಷಗಳಾದ ಶಿವಸೇನೆ ಮತ್ತು ಎನ್‌ಸಿಪಿ ರಾಜ್ಯಪಾಲರಿಗೆ ಮನವಿ ಮಾಡಿವೆ ಎಂದರು.

ರಾಜ್ಯಪಾಲರು ಎಲ್ಲಾ ಮನವಿಗಳನ್ನು ಸ್ವೀಕರಿಸಿದ್ದು, ಇಂದು ಗುರುವಾರ ಸಂಜೆ 5.30 ಕ್ಕೆ ಪ್ರಮಾಣ ವಚನ ಸಮಾರಂಭ ನಡೆಯಲಿದೆ. ದೇವೇಂದ್ರ ಫಡ್ನವೀಸ್ ಅವರು ಮಹಾರಾಷ್ಟ್ರ ಮುಖ್ಯಮಂತ್ರಿಯಾಗಿ, ಏಕನಾಥ್ ಶಿಂಧೆ ಹಾಗೂ ಅಜಿತ್ ಪವಾರ್ ಅವರು ಉಪ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಸೇರಿದಂತೆ ಹಲವು ರಾಷ್ಟ್ರೀಯ ಬಿಜೆಪಿ ನಾಯಕರು ಈ ಪ್ರಮಾಣ ವಚನ ಸ್ವೀಕಾರ ಸಮಾರಂಭ ಭಾಗವಹಿಸಲಿದ್ದಾರೆ.

## ಭತ್ತದ ಗದ್ದೆಗಿಳಿದ ಹೆಲಿಕಾಪ್ಟರ್

ಮಯೂರ್‌ಬಂಜ್, ಡಿ.4-ಒಡಿಶಾದ ಮಯೂರ್‌ಬಂಜ್ ಜಿಲ್ಲೆಯ ಅರ್ಮದಾ ಗ್ರಾಮದಲ್ಲಿ ಭತ್ತದ ಗದ್ದೆಯಲ್ಲಿ ಭಾರತೀಯ ನೌಕಾಪಡೆ ಹೆಲಿಕಾಪ್ಟರ್ ತುರ್ತು ಭೂ ಸ್ಪರ್ಶ ಮಾಡಿದೆ.

ಹೆಲಿಕಾಪ್ಟರ್ ಲ್ಯಾಂಡ್ ಆದ ಬಳಿಕ ಪೈಲಟ್ ಕೆಳಗಿಳಿದು ಪರಿಶೀಲನೆ ನಡೆಸಿ ದ್ದಾರೆ. ಅರ್ಧ ಗಂಟೆಯ ನಂತರ ಹೆಲಿ ಕಾಪ್ಟರ್ ಮತ್ತೆ ಹಾರಾಟ ನಡೆಸಿದೆ ಎಂದು ಸ್ಥಳೀಯ ಪೊಲೀಸರು ಮಾಹಿತಿ ನೀಡಿ ದ್ದಾರೆ. ಸಣ್ಣ ತಾಂತ್ರಿಕ ದೋಷದಿಂದ ಹೆಲಿ ಕಾಪ್ಟರ್ ತುರ್ತು ಭೂಸ್ಪರ್ಶ ಮಾಡಿತ್ತು. ಪೈಲಟ್ ದೋಷವನ್ನು ಸರಿಪಡಿಸಿ ಕೊಂಡೊಯ್ದಿದ್ದಾರೆ ಎಂದು ಪೊಲೀಸ್ ವರಿಷ್ಠಾಧಿಕಾರಿ ವರುಣ್ ಗುಂಟುಪಲ್ಲಿ ಮಾಧ್ಯಮದವರಿಗೆ ತಿಳಿಸಿದ್ದಾರೆ.

## ಜಿಲ್ಲಾಧ್ಯಕ್ಷರಾಗಿ ಒಡೇನಪುರ

(1ನೇ ಪುಟದಿಂದ) ಅವಧಿಗೆ ಆಯ್ಕೆಯಾಗಿ ದ್ದಾರೆ. 68 ಮತಗಳಲ್ಲಿ 37 ಮತ ಪಡೆದು ಒಡೆನಪುರಚುನಾಯಿತರಾಗಿದ್ದಾರೆ.ಇವರೊ ಟ್ಟಿಗೆ ಕೋಶ್ಯಾಧ್ಯಕ್ಷರಾಗಿ ತಿಪ್ಪೇಸ್ವಾಮಿ ಬಿ. ಆರ್. ಹಾಗೂ ರಾಜ್ಯ ಪರಿಷತ್ ಸದಸ್ಯ ರಾಗಿ ಜಿ. ಓಬಳಪ್ಪ ಆಯ್ಕೆಯಾಗಿದ್ದಾರೆ.

# ಸಾರ್ವಜನಿಕ ಪ್ರದೇಶಗಳಲ್ಲಿ ಗೋಮಾಂಸ ನಿಷೇಧ

**(1ನೇ ಪುಟದಿಂದ)** ಸಿದಂತೆ ಅಸ್ತಿತ್ವದಲ್ಲಿರುವ ಕಾನೂನಿಗೆ ತಿದ್ದುಪಡಿ ತಂದು ಹೊಸ ನಿಬಂಧನೆಗ ಳನ್ನು ಸೇರಿಸಲು ರಾಜ್ಯ ಸಚಿವ ಸಂಪುಟ ನಿರ್ಧಾರ ತೆಗೆದುಕೊಂಡಿದೆ ಎಂದು ಅವರು ಹೇಳಿದರು.

ರೆಸ್ಟೋರೆಂಟ್‌ಗಳು, ಹೋಟೆಲ್‌ಗಳು ಮತ್ತು ಸಾರ್ವಜನಿಕ ಪ್ರದೇಶಗಳಲ್ಲಿ ಗೋಮಾಂಸ ಸೇವನೆಯನ್ನು ನಿಷೇಧಿಸಲು ನಾವು ನಿರ್ಧರಿಸಿ ದ್ದೇವೆ ಎಂದು ಶರ್ಮ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಅವರು ಸಚಿವ ಸಂಪುಟ ಸಭೆಗೆ ವರ್ಚುವಲ್ ಆಗಿ ಭಾಗಿಯಾಗಿದ್ದರು.

ಗೋಮಾಂಸಕ್ಕೆ ಸಂಬಂಧಿಸಿದಂತೆ ಚಾಲ್ತಿ ಯಲ್ಲಿರುವ ಕಾನೂನು ಬಲಿಷ್ಠವಾಗಿದೆಯಾದರೂ, ರೆಸ್ಟೋರೆಂಟ್, ಹೋಟೆಲ್ ಮತ್ತು ಧಾರ್ಮಿಕ ಅಥವಾ ಸಾಮಾಜಿಕ ಸಭೆಗಳಲ್ಲಿ ಅದರ ಸೇವನೆಗೆ ನಿಷೇಧ ಇಲ್ಲ ಎಂದು ಅವರು ವಿವರಿಸಿದರು.

# ಹರಪನಹಳ್ಳಿ: ವಿವಿಧ ಕಾಮಗಾರಿಗಳಿಗೆ ಚಾಲನೆ

ಹರಪನಹಳ್ಳಿ,ಡಿ.4- ಪಟ್ಟಣ ಸೇರಿದಂತೆ ತಾಲ್ಲೂಕಿನ ವಿವಿಧೆಡೆ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಇಂದು ಚಾಲನೆ ನೀಡಿದರು.



ಪಟ್ಟಣದ ಬಾಲಕಿಯರ ಪ್ರೌಢಶಾಲೆ ಸೇರಿ ಕ್ಷೇತ್ರದ ಒಟ್ಟು 33 ಸ.ಹಿ.ಪ್ರಾ ಶಾಲೆಗಳಿಗೆ 2023-24ನೇ ಸಾಲಿನ ಕೆಕೆಆರ್‌ಡಿಬಿ ಯೋಜನೆಯಡಿ ಭೌತಿಕ ಮತ್ತು ಗುಣಾತ್ಮಕ ಮೂಲಭೂತ ಸೌಲಭ್ಯ ಒದಗಿಸುವುದು, ಶಾಲಾ ಕೊಠಡಿಗಳ ಉನ್ನತೀಕರಣ ಮತ್ತು ಸೌರಶಕ್ತಿ ವ್ಯವಸ್ಥೆ ಘಟಕಗಳನ್ನು ಸ್ಥಾಪಿಸುವ ಕಾಮಗಾರಿಗೆ ಚಾಲನೆ ನೀಡಿದರು.

ಬಳಿಕ ದೇವರ ತಿಮ್ಮಾಲಾಪುರ, ಹರಿಹರ ರಸ್ತೆಯ ಆಶ್ರಯ ಕ್ಯಾಂಪ್ ಮತ್ತು ಚಿರಸ್ತಹಳ್ಳಿ ಗ್ರಾಮದ ಸ.ಹಿ.ಪ್ರಾ ಶಾಲೆ ಸೇರಿ ಒಟ್ಟು 46 ಶಾಲೆಗಳಿಗೆ 2023-24ನೇ ಸಾಲಿನ ಕೆಕೆಆರ್‌ಡಿಬಿ ಯೋಜನೆಯಡಿ ಭೌತಿಕ ಮತ್ತು ಗುಣಾತ್ಮಕ ಮೂಲಭೂತ ಸೌಲಭ್ಯ ಒದಗಿಸುವ ಕಾಮಗಾರಿಗೆ ಚಾಲನೆ ನೀಡಿದರು.

ನಂತರ ತಾಲ್ಲೂಕಿನ ಇಟ್ಟಿಗುಡಿ ಗ್ರಾಮದಿಂದ ನೀಲಗುಂದ ಕ್ರಾಸ್‌ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

ಬಳಿಕ ಕಡತಿ ಗ್ರಾಮ ಪಂಚಾಯ್ತಿಯಲ್ಲಿ ವಸತಿ ಯೋಜನೆಯಡಿ ಮಂಜೂರಾದ ಮನೆಗಳ ಹಕ್ಕು ಪತ್ರ ಗಳನ್ನು ಫಲಾನುಭವಿಗಳಿಗೆ ವಿತರಿಸಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಟಿ.ವೆಂಕಟೇಶ್, ಸದಸ್ಯರಾದ ಅಬ್ದುಲ್ ರೆಹಮಾನ್, ಗೊಂಗಡಿ ನಾಗರಾಜ, ಉದ್ದಾರ ಗಣೇಶ್, ಜಾಕೀರ್ ಹುಸೇನ್, ಎಣ್ಣಿ ಕುಬೇಂದ್ರನಾಯ್ಕ್, ಕ್ಷೇತ್ರ ಶಿಕ್ಷಣಾಧಿಕಾರಿ ಎಚ್. ಲೇಪಾಕ್ಷಪ್ಪ, ಮುಖ್ಯ ಶಿಕ್ಷಕ ಚೇತನ್, ಗುಡಿ ನಾಗರಾಜ, ಎಲ್.ಎಂ.ನಾಯ್ಕ್, ಸೈಯದ್ ಇರ್ಫಾನ್, ಶಂಕರ್ ಸೇರಿದಂತೆ ಇತರರು ಇದ್ದರು.


# ರಿಟರ್ನಿಂಗ್ ಅಧಿಕಾರಿಗಳು, ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ ಹಾಗೂ ಸಹಕಾರ ಸಂಘಗಳ ನಿಬಂಧಕರು, ದಾವಣಗೆರೆ ಉಪವಿಭಾಗ, ದಾವಣಗೆರೆ.

**ನಮೂನೆ 12**

**(ನಿಯಮ 14(3))**

## ಚುನಾವಣಾ ಸೂಚನೆ

ಶಿವ ಸಹಕಾರಿ ಬ್ಯಾಂಕ್ ನಿ., ದಾವಣಗೆರೆ. ದಾವಣಗೆರೆ ತಾಲ್ಲೂಕು, ಜಿಲ್ಲೆ. ಇದರ ಆಡಳಿತ ಮಂಡಲಿಗೆ **ದಿನಾಂಕ : 22-12-2024 ರಿಂದ ಮುಂದಿನ ಐದು (5) ವರ್ಷಗಳ ಅವಧಿಗೆ ಚುನಾವಣೆ ನಡೆಸಲು** ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು (ಪ್ರಭಾರ) ಹಾಗೂ ಚುನಾವಣಾಧಿಕಾರಿಗಳು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಇವರ ಆದೇಶ ಸಂಖ್ಯೆ: ಸ.ಚು.ಪ್ರಾ/ಬೆಂ.ಪ್ರಾ/ದಾ.ಜಿ/ರಿಆನೇ/11/2024-25, **ದಿನಾಂಕ: 13-09-2024ರನ್ವಯ ಸಂಘದ ಚುನಾವಣೆಯನ್ನು ದಿನಾಂಕ: 22-12-2024ನೇ ಭಾನುವಾರದಂದು, ಶ್ರೀ ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್‌ನ ಹಿರಿಯ ಪ್ರಾಥಮಿಕ ಶಾಲೆ # 2037, ಬಸವ ಮಂಟಪ, ತರಳಬಾಳು ಬಡಾವಣೆ, (3ನೇ ಬಸ್‌ಸ್ಟಾಪ್, ಈಶ್ವರ ಪಾರ್ವತಿ ಗಣಪತಿ ದೇವಸ್ಥಾನದ ಎದುರು) ದಾವಣಗೆರೆ ಸ್ಥಳದಲ್ಲಿ ಬೆಳಿಗ್ಗೆ 9-00 ಗಂಟೆಯಿಂದ ಸಾಯಂಕಲ 04-00 ಗಂಟೆವರೆಗೆ** ಮತದಾನಕ್ಕೆ ನಿಗದಿಪಡಿಸಿದ್ದು, ಈ ಕೆಳಕಂಡಂತೆ ಸಂಘದ ನಿರ್ದೇಶಕರುಗಳ ಆಯ್ಕೆಗಾಗಿ ನಡೆಯಲಿರುವ ಚುನಾವಣಾ ವೇಳಾಪಟ್ಟಿ.

**ಬ್ಯಾಂಕಿನ ಬೈಲಾ ನಂ.50(1) ರ ಪ್ರಕಾರ ಚುನಾಯಿಸಬೇಕಾದ ನಿರ್ದೇಶಕರ ಒಟ್ಟು ಸಂಖ್ಯೆ: 13 ಇದರಲ್ಲಿ**

| | | |
|---|---|---|
| 1 | ಸಾಮಾನ್ಯ ಸ್ಥಾನಗಳು | 7 (ಏಳು) |
| 2 | ಪರಿಶಿಷ್ಟ ಜಾತಿಗೆ ಮೀಸಲಿರಿಸಿದ ನಿರ್ದೇಶಕರ ಸ್ಥಾನಗಳ ಸಂಖ್ಯೆ | 1 (ಒಂದು) |
| 3 | ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿದ ನಿರ್ದೇಶಕರ ಸ್ಥಾನಗಳ ಸಂಖ್ಯೆ | 1 (ಒಂದು) |
| 4 | ಮಹಿಳೆಯರಿಗಾಗಿ ಮೀಸಲಿರಿಸಿದ ನಿರ್ದೇಶಕರ ಸ್ಥಾನಗಳ ಸಂಖ್ಯೆ | 2 (ಎರಡು) |
| 5 | ಹಿಂದುಳಿದ ಪ್ರವರ್ಗದಲ್ಲಿ 'ಎ' ಗೆ ಮೀಸಲಿರಿಸಿದ ನಿರ್ದೇಶಕರ ಸ್ಥಾನಗಳ ಸಂಖ್ಯೆ | 1 (ಒಂದು) |
| 6 | ಹಿಂದುಳಿದ ಪ್ರವರ್ಗದಲ್ಲಿ 'ಬಿ' ಗೆ ಮೀಸಲಿರಿಸಿದ ನಿರ್ದೇಶಕರ ಸ್ಥಾನಗಳ ಸಂಖ್ಯೆ | 1 (ಒಂದು) |

## ಚುನಾವಣಾ ವೇಳಾಪಟ್ಟಿ

| ಕ್ರ.ಸಂ. | ಚುನಾವಣಾ ಕಾರ್ಯಸೂಚಿ | ನಿಯಮ ಸಂಖ್ಯೆ | ದಿನಾಂಕ ಮತ್ತು ವೇಳೆ | ವಿವರ ಮತ್ತು ಸ್ಥಳ |
|---|---|---|---|---|
| 1 | ಆಕಾಂಕ್ಷೆವುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಸಲು ದಿನಾಂಕ ಮತ್ತು ವೇಳೆ | 14(ಎ) | ದಿನಾಂಕ 08.12.2024ನೇ ಭಾನುವಾರ ಪ್ರಾರಂಭ ಬೆಳಿಗ್ಗೆ 11.00 ಘಂಟೆಯಿಂದ ಮಧ್ಯಾಹ್ನ 3.00 ಘಂಟೆಯವರೆಗೆ | ಬ್ಯಾಂಕಿನ ಆಡಳಿತ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿ/ಸಹಾಯಕ ಸಿಬ್ಬಂದಿಯವರಿಗೆ |
| 2 | ಆಕಾಂಕ್ಷೆವುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ | 14(ಎ) | ದಿನಾಂಕ 14.12.2024ನೇ ಶನಿವಾರ ಬೆಳಿಗ್ಗೆ 11.00 ಘಂಟೆಯಿಂದ ಮಧ್ಯಾಹ್ನ 3.00 ಘಂಟೆಯವರೆಗೆ | ಬ್ಯಾಂಕಿನ ಆಡಳಿತ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿ/ಸಹಾಯಕ ಸಿಬ್ಬಂದಿಯವರಿಗೆ |
| 3 | ಅಭ್ಯರ್ಥಿಗಳಿಂದ ಸಲ್ಲಿಸಲ್ಪಟ್ಟ ನಾಮಪತ್ರಗಳ ಪರಿಶೀಲನೆ | 14(ಬಿ) | ದಿನಾಂಕ 15.12.2024ನೇ ಭಾನುವಾರ ಬೆಳಿಗ್ಗೆ 11.00 ರಿಂದ | ಬ್ಯಾಂಕಿನ ಆಡಳಿತ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿ/ಸಹಾಯಕ ಸಿಬ್ಬಂದಿಗಳಿಂದ |
| 4 | ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ | 14(ಬಿ) (4) | ದಿನಾಂಕ 15.12.2024ನೇ ಭಾನುವಾರ ನಾಮಪತ್ರ ಪರಿಶೀಲನೆ ನಂತರ | ಬ್ಯಾಂಕಿನ ಆಡಳಿತ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿ/ಸಹಾಯಕ ಸಿಬ್ಬಂದಿಗಳಿಂದ |
| 5 | ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳಿಂದ ನಾಮ ಪತ್ರಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ ಮತ್ತು ವೇಳೆ | 14(ಸಿ) | ದಿನಾಂಕ 16.12.2024ನೇ ಸೋಮವಾರ ಮಧ್ಯಾಹ್ನ 3.00 ಘಂಟೆಯವರೆಗೆ | ಬ್ಯಾಂಕಿನ ಆಡಳಿತ ಕಛೇರಿಯಲ್ಲಿ ಖುದ್ದಾಗಿ ಅಭ್ಯರ್ಥಿಗಳಿಂದ ರಿಟರ್ನಿಂಗ್ ಅಧಿಕಾರಿ/ಸಹಾಯಕ ಸಿಬ್ಬಂದಿಯವರಿಗೆ |
| 6 | ಚುನಾವಣಾಧಿಕಾರಿಗಳವರಿಂದ ಅರ್ಹ ಉಮೇದುದಾರರ/ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ | 14(ಡಿ) | ದಿನಾಂಕ 16.12.2024ನೇ ಸೋಮವಾರ ಮಧ್ಯಾಹ್ನ 3.00 ಘಂಟೆಯ ನಂತರ | ಬ್ಯಾಂಕಿನ ಆಡಳಿತ ಕಛೇರಿಯ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ |
| 7 | ಅವಶ್ಯಬಿದ್ದಲ್ಲಿ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳಿಗೆ ಚುನಾವಣಾ ಚಿಹ್ನೆಗಳ ಹಂಚಿಕೆ | 14(ಇ) | ದಿನಾಂಕ 16.12.2024ನೇ ಸೋಮವಾರ ಮಧ್ಯಾಹ್ನ 4.00 ಘಂಟೆಯ ನಂತರ | ಬ್ಯಾಂಕಿನ ಆಡಳಿತ ಕಛೇರಿಯ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ |
| 8 | ಚಿಹ್ನೆಗಳ ಸಹಿತ ಕ್ರಮಬದ್ಧವಾಗಿ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ | 14(ಇ) ಮತ್ತು 14 (ಎಫ್) | ದಿನಾಂಕ 17.12.2024ನೇ ಮಂಗಳವಾರ ಬೆಳಿಗ್ಗೆ 11.00 ಘಂಟೆಗೆ | ಬ್ಯಾಂಕಿನ ಆಡಳಿತ ಕಛೇರಿಯ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ |
| 9 | ಮತದಾನದ ಸ್ಥಳ ದಿನಾಂಕ ಮತ್ತು ವೇಳೆ | 14(ಜಿ) ಯಿಂದ (ಡಬ್ಲ್ಯೂ) ವರೆಗೆ | ದಿನಾಂಕ 22.12.2024ನೇ ಭಾನುವಾರ ಬೆಳಿಗ್ಗೆ 9.00 ಘಂಟೆಯಿಂದ ಸಂಜೆ 4.00 ಘಂಟೆಯವರೆಗೆ | ರಿಟರ್ನಿಂಗ್ ಅಧಿಕಾರಿ ಹಾಗೂ ಅವರಿಂದ ನೇಮಕಗೊಂಡ ಸಿಬ್ಬಂದಿ ವರ್ಗದವರಿಂದ, **ಶ್ರೀ ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್‌ನ ಹಿರಿಯ ಪ್ರಾಥಮಿಕ ಶಾಲೆ #2037, ಬಸವ ಮಂಟಪ, ತರಳಬಾಳು ಬಡಾವಣೆ, ದಾವಣಗೆರೆ.** |
| 10 | ಮತಗಳ ಎಣಿಕೆ ದಿನಾಂಕ, ವೇಳೆ ಮತ್ತು ಸ್ಥಳ | 14(ಎಕ್ಸ್) | ದಿನಾಂಕ 22.12.2024ನೇ ಭಾನುವಾರ ಮತದಾನ ಮುಕ್ತಾಯಗೊಂಡ ನಂತರ | ರಿಟರ್ನಿಂಗ್ ಅಧಿಕಾರಿ ಹಾಗೂ ಅವರಿಂದ ನೇಮಕಗೊಂಡ ಸಿಬ್ಬಂದಿ ವರ್ಗದವರಿಂದ, **ಶ್ರೀ ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್‌ನ ಹಿರಿಯ ಪ್ರಾಥಮಿಕ ಶಾಲೆ #2037, ಬಸವ ಮಂಟಪ, ತರಳಬಾಳು ಬಡಾವಣೆ, ದಾವಣಗೆರೆ.** |
| 11 | ಚುನಾವಣಾ ಫಲಿತಾಂಶ ಘೋಷಣೆ ಮತ್ತು ಪ್ರಕಟಣೆ ದಿನಾಂಕ, ವೇಳೆ ಮತ್ತು ಸ್ಥಳ | 14(ವೈ) | ದಿನಾಂಕ 22.12.2024ನೇ ಭಾನುವಾರದಂದು ಮತಗಳ ಏಣಿಕೆಯ ನಂತರ | ರಿಟರ್ನಿಂಗ್ ಅಧಿಕಾರಿಗಳಿಂದ **ಶ್ರೀ ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್‌ನ ಹಿರಿಯ ಪ್ರಾಥಮಿಕ ಶಾಲೆ #2037, ಬಸವ ಮಂಟಪ, ತರಳಬಾಳು ಬಡಾವಣೆ, ದಾವಣಗೆರೆ ಮತ್ತು ಬ್ಯಾಂಕಿನ ಆಡಳಿತ ಕಛೇರಿಯ ಸೂಚನಾ ಫಲಕದಲ್ಲಿ.** |

ಸ್ಥಳ : ದಾವಣಗೆರೆ
ದಿನಾಂಕ : 03.12.2024

ಸಹಿ/- **(ಮಂಜುಳ ಎಸ್.)** ರಿಟರ್ನಿಂಗ್ ಅಧಿಕಾರಿಗಳು,
**ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ, ದಾವಣಗೆರೆ.**

# ಹರಿಹರ 'ರಿಪಬ್ಲಿಕ್ ಆಫ್ ಬಳ್ಳಾರಿ' ಆಗುತ್ತಿದೆಯೇ ?

## ಅಕ್ರಮ ಮಣ್ಣು ಗಣಿಗಾರಿಕೆ ತಡೆಗೆ ಆಗ್ರಹಿಸಿ ಶಿರಸ್ತೇದಾರರಿಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ಮನವಿ



ಹರಿಹರ,ಡಿ.4- ತಾಲ್ಲೂಕಿನ ವಿವಿಧ ಗ್ರಾಮ ಗಳ ಪಟ್ಟಾ ಹಾಗೂ ಸರ್ಕಾರಿ ಜಮೀನುಗಳಲ್ಲಿ ನಡೆಯುತ್ತಿರುವ ಅವ್ಯಾಹತ ಅಕ್ರಮ ಮಣ್ಣು ಗಣಿಗಾರಿಕೆಯನ್ನು ತಡೆಯಲು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಇಂದು (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ಶಿರಸ್ತೇದಾರರಿಗೆ ಮನವಿ ಸಲ್ಲಿಸಿತು.

ನಂತರ ಸಂಘಟನೆಯ ತಾಲ್ಲೂಕು ಸಂಚಾಲಕ ಪಿ.ಜೆ.ಮಹಾಂತೇಶ್ ಮಾತನಾಡಿ, ತಾಲ್ಲೂಕಿನ ಗುತ್ತೂರು, ಹರ್ಲಾಪುರ, ಸಾರಥಿ, ಪಾಮೇನಹಳ್ಳಿ, ದೀಟೂರು, ಚಿಕ್ಕಬಿದರಿ, ಕರಲಹಳ್ಳಿ, ಬುಳ್ಳಾಪುರ, ರಾಜನಹಳ್ಳಿ, ಧೂಳೆಹೊಳೆ, ಇಂಗಳಗೊಂದಿ ಸೇರಿದಂತೆ ಹಲವಾರು ಗ್ರಾಮಗಳಲ್ಲಿ ಮಣ್ಣಿನ ಗಣಿಗಾರಿಕೆ ಈ ಹಿಂದಿನ ವರ್ಷಗಳಲ್ಲಿ ಅವ್ಯಾಹತವಾಗಿ ನಡೆಸಲಾಗಿದೆ. ಅಲ್ಲದೇ ಈ ವರ್ಷವೂ ಆ ಭಾಗದಲ್ಲಿ ಗಣಿಗಾರಿಕೆಗೆ ಸಿದ್ಧತೆ ನಡೆಸಲಾಗಿದೆ.

ನದಿ ದಡದ ಈ ಗ್ರಾಮಗಳಲ್ಲಿ 20 ರಿಂದ 40 ಅಡಿಗಳ ಆಳದವರೆಗೆ ಜೆಸಿಬಿ, ಹಿಟಾಚಿಯಂತಹ ಬೃಹತ್ ಯಂತ್ರಗಳಿಂದ ಗುಂಡಿಗಳನ್ನು ತೋಡುತ್ತಾ ಅಕ್ರಮ ಮಣ್ಣು ಗಣಿಗಾರಿಕೆ ನಡೆಸಲಾಗಿದೆ. ರಾಜನಹಳ್ಳಿ ಗ್ರಾಮದಲ್ಲಿ ಅಂದಾಜು 2 ಎಕರೆಯಷ್ಟು ಸರ್ಕಾರದಿಂದ ಮಂಜೂರಾದ ಪರಿಶಿಷ್ಟ ಜನಾಂಗದವರ ರುದ್ರಭೂಮಿಯಲ್ಲೂ ಗಣಿಗಾರಿಕೆ ನಡೆಸಿ ಮೃತರ ಅಂತ್ಯ ಸಂಸ್ಕಾರ ನಡೆಸದಂತಾಗಿದೆ, ಅಲ್ಲಿನ ಪರಿಶಿಷ್ಟರು ಮೃತಪಟ್ಟರೆ ನದಿ ದಡ, ರಸ್ತೆ ಅಕ್ಕಪಕ್ಕವೇ ಅಂತ್ಯ ಸಂಸ್ಕಾರ ಮಾಡುವ ದುಸ್ಥಿತಿ ಇದೆ.

3 ಅಡಿಗಿಂತ ಹೆಚ್ಚು ಮಣ್ಣನ್ನು ತೆಗೆದರೆ ಅಂತಹ ಪಟ್ಟಾ ಜಮೀನುಗಳನ್ನು ಸರ್ಕಾರ ತನ್ನ ಸುಪರ್ದಿಗೆ ಪಡೆಯಲು ಅವಕಾಶವಿದ್ದರೂ ತಾಲ್ಲೂಕು, ಜಿಲ್ಲಾಡಳಿತ, ಪರಿಸರ ಮತ್ತು ಕೃಷಿ ಇಲಾಖೆಗಳು ಕಣ್ಣು ಮುಚ್ಚಿ ಕುಳಿತಿವೆ.

ಮಣ್ಣು ಗಣಿಗಾರಿಕೆ ಆರಂಭಿಸಲು ಪಟ್ಟಭದ್ರರು ಈಗಾಗಲೇ ವಿವಿಧ ಪಕ್ಷಗಳ ಜನಪ್ರತಿನಿಧಿಗಳು, ಮುಖಂಡರು, ಅಧಿಕಾರಿಗಳನ್ನು ಸಂಪರ್ಕಿಸಿ ವ್ಯಾಪಾರ ಕುದುರಿಸುತ್ತಿದ್ದಾರೆ. ಈ ವರ್ಷವೂ ಗಣಿಗಾರಿಕೆಗೆ ಅವಕಾಶ ನೀಡಿದರೆ ತಾಲ್ಲೂಕಿನ ಭೌಗೋಳಿಕ ರಚನೆ ಮೇಲೆ ತೀವ್ರ ದುಷ್ಪರಿಣಾಮ ಬೀರುತ್ತದೆ.

ಒಂದು ಜಮೀನಿನ ರೈತ ತನ್ನ ಜಮೀನಿನ ಮಣ್ಣನ್ನು ಮಾರಿಕೊಂಡು 20 ಅಡಿ ಗುಂಡಿ ಸೃಷ್ಟಿಸಿದರೆ ಪಕ್ಕದ ಜಮೀನಿನ ಬಡ ರೈತನಿಗೆ ಕೃಷಿ ಕಾಯಕ ನಡೆಸಲು ಹೇಗೆ ಸಾಧ್ಯವಾಗುತ್ತದೆ. ಇದು ತಾಲ್ಲೂಕಿನ ನದಿ ದಡದ ಜೈವಿಕ, ಭೌಗೋಳಿಕ ಸ್ಥಿತಿಗಳನ್ನು ಏರುಪೇರು ಮಾಡುವ ಅಪಾಯವಿದೆ.

ಈವರೆಗೆ ನಡೆದಿರುವ ಅಕ್ರಮ ಗಣಿಗಾರಿಕೆ ಗಮನಿಸಿದರೆ ಹರಿಹರವು ರಿಪಬ್ಲಿಕ್ ಆಫ್ ಬಳ್ಳಾರಿಯಂತೆ ತಪ್ಪು ಹೆಜ್ಜೆಯತ್ತ ಸಾಗುತ್ತಿದೆಯೇ ಎಂಬ ದಟ್ಟ ಅನುಮಾನ ಮೂಡುತ್ತಿದೆ. ಕೂಡಲೇ ರಾಜ್ಯ ಸರ್ಕಾರವು ಇದಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮಕೈಗೊಳ್ಳ ಬೇಕೆಂದು ಅವರು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಸಂಘಟನೆಯ ಸಾಕಮ್ಮ, ಬಸವರಾಜಪ್ಪ, ಸಂಜೀವ್, ಸುನೀತಾ, ಶೈಲು, ಅಣ್ಣಪ್ಪ, ರೇಣುಕಮ್ಮ, ಬಸವರಾಜ್, ಹರೀಶ್, ಶಿವಣ್ಣ, ಹನುಮಂತಪ್ಪ, ಹಾಲಮ್ಮ, ಮುಬೀನಾ, ವೀರೇಶ್, ಸಂತೋಷ, ಪರಮೇಶ್, ನಾಗಪ್ಪ, ನಾಗರಾಜ್, ಮಂಜು, ನೀಲಪ್ಪ, ಹಾಲಮ್ಮ, ಲಕ್ಷ್ಮಣರೆಡ್ಡಿ ಇದ್ದರು.

# ಶೀಘ್ರ ಹದಡಿ ರಸ್ತೆ ದುರಸ್ತಿಗೆ ಆಗ್ರಹ



**ವಿಶ್ವ ಕರ್ನಾಟಕ ರಕ್ಷಣಾ ವೇದಿಕೆ ಪ್ರತಿಭಟನೆ**

ದಾವಣಗೆರೆ, ಜು. 4- ನಗರದ ಜಯದೇವ ವೃತ್ತದಿಂದ ಅಂಬೇಡ್ಕರ್ ವೃತ್ತದ ಮೂಲಕ ಹಾದು ಹೋಗುವ ಹದಡಿ ರಸ್ತೆಯು ಸಂಪೂರ್ಣ ಹದಗೆಟ್ಟಿದ್ದು, ಕೂಡಲೇ ದುರಸ್ಥಿ ಪಡಿಸುವಂತೆ ಆಗ್ರಹಿಸಿ ವಿಶ್ವ ಕರ್ನಾಟಕ ರಕ್ಷಣಾ ವೇದಿಕೆಯಿಂದ ಬುಧವಾರ ಜಯದೇವ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಹದಡಿ ರಸ್ತೆಯಲ್ಲಿ ಅತಿ ಹೆಚ್ಚು ವಾಹನಗಳ ಸಂಚರಿಸುತ್ತಿವೆ. ವಾಹನ ಚಾಲಕರು ಹಾಗ ಪಾದಚಾರಿಗಳು ನರಕ ಯಾತೆ ಅನುಭವಿಸು ವಂತಾಗಿದೆ. ನಿತ್ಯವೂ ಜೀವಭಯದಿಂದಲೇ ಸಂಚರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ವಿಶ್ವ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಕೆ.ಜಿ. ಯಲ್ಲಪ್ಪ ಆರೋಪಿಸಿದರು.

ಕಳೆದ ಎರಡು ತಿಂಗಳಿನಿಂದ ಗುಂಡಿಗಳಾಗಿ ರಸ್ತೆ ಪೂರ್ಣ ಹದಗೆಟ್ಟಿದ್ದರೂ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ. ನಿತ್ಯವೂ ಈ ರಸ್ತೆಯಲ್ಲಿ ಹತ್ತಾರು ಆಂಬುಲೆನ್ಸ್‌ಗಳು ಸಂಚರಿಸುತ್ತವೆ. ಜೀವನ್ಮರಣದ ಹೋರಾಟದಲ್ಲಿರುವ ರೋಗಿಗಳ ಗತಿ ಏನಾಗುತ್ತದೆ ಎಂಬುದನ್ನು ಅಧಿಕಾರಿಗಳು ಚಿಂತಿಸಬೇಕು. ಪ್ರಾಣ ಬಲಿಯಾಗುವ ವರೆಗೆ ಕಾಯಬೇಕು? ಎಂದು ಯಲ್ಲಪ್ಪ ಆಕ್ರೋಶ ಹೊರ ಹಾಕಿದರು.

ತಕ್ಷಣವೇ ರಸ್ತೆ ದುರಸ್ಥಿ ಕಾಮಗಾರಿ ಆರಂಭಿಸಬೇಕು. ಇಲ್ಲದಿದ್ದರೆ ವೇದಿಕೆಯಿಂದ ಬೃಹತ್ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ವೇದಿಕೆಯ ಜಿಲ್ಲಾಧ್ಯಕ್ಷ ಬಾಬುರಾವ್, ಪ್ರಧಾನ ಕಾರ್ಯದರ್ಶಿ ಅಜಮ್ ರಜ್ವನಿ, ನಗರಾಧ್ಯಕ್ಷ ಸಿದ್ದೇಶ್ ಎಸ್., ನಾಗರಾಜ ಗೌಡ, ಜಿ.ಮಹಾಲಿಂಗಪ್ಪ, ದುಗ್ಗೇಶ್, ದಯಾನಂದ್, ಅಜ್ಮದ್ ಅಲಿ, ಮೆಹಬೂಬ್, ಸಂತೋಷ್ ದೊಡ್ಮನಿ, ರವಿ ಎಂ., ಗಿರೀಶ್, ಗದಿಗೆಪಪ್ಪ, ಗಿರೀಧರ, ರಾಮಣ್ಣ ತೆಲಗಿ, ಶಾರೂಕ್ ಹಾಷ್ಮಿ, ಅಣ್ಣೇಶ್, ಪೃಥ್ವಿ, ರಮೇಶ್, ಕಿರಣ್, ಅವಿನಾಶ್, ರವಿ, ಬಸವರಾಜ್, ಆನಂದ್, ಯತಿರಾಜ್, ನವೀನ್, ಪ್ರಶಾಂತ್ ಇತರರಿದ್ದರು.

# ಅಧಿಕಾರ ಹಂಚಿಕೆ ಒಪ್ಪಂದ ಆಗಿಲ್ಲ



ಬೆಂಗಳೂರು, ಡಿ.4- ಅಧಿಕಾರ ಹಂಚಿಕೆ ವಿಷಯದಲ್ಲಿ ಯಾವುದೇ ಒಪ್ಪಂದ ಆಗಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಖಾಸಗಿ ಚಾನಲ್ ಒಂದಕ್ಕೆ ನೀಡಿದ ಸಂದರ್ಶನದಲ್ಲಿ ಅಧಿಕಾರ ಹಂಚಿಕೆ ಸೂತ್ರ ಇದೆ ಎಂದು ಬಹಿರಂಗ ಪಡಿಸಿದ್ದರು.

ಮುಡಾಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ವಿರುದ್ಧ ರಾಜ್ಯ ಹೈಕೋರ್ಟ್ ನಲ್ಲಿ ಪ್ರತ್ಯೇಕವಾಗಿ ಎರಡು ಪ್ರಕರಣಗಳು ವಿಚಾರಣೆಗೆ ಬರುತ್ತಿರುವ ಸಮಯದಲ್ಲಿಯೇ ದೆಹಲಿಯಲ್ಲಿ ಶಿವಕುಮಾರ್ ನೀಡಿರುವ ಹೇಳಿಕೆ ಚರ್ಚೆಗೆ ಗ್ರಾಸವಾಗಿದೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರದ ಚುಕ್ಕಾಣಿ ಹಿಡಿಯುವ ಸಂದರ್ಭದಲ್ಲಿ ಗಾದಿಗೆ ಏರಲು ಸಿದ್ದರಾಮಯ್ಯ ಹಾಗೂ ಶಿವಕುಮಾರ್ ನಡುವೆ ಪೈಪೋಟಿ ನಡೆದಿತ್ತು.

ಈ ಸಂದರ್ಭದಲ್ಲಿ ಮಧ್ಯೆ ಪ್ರವೇಶಿಸಿದ್ದ ಎಐಸಿಸಿ, ಅಧಿಕಾರ ಸೂತ್ರ ರೂಪಿಸಿತ್ತು ಎಂಬುದು ಜನಜನಿತವಾಗಿತ್ತು, ಆದರೆ, ಈ ಬಗ್ಗೆ ಸಿದ್ದರಾಮಯ್ಯ ಅವರಾಗಲೀ, ಶಿವಕುಮಾರ್ ಅವರಾಗಲೀ ಬಹಿರಂಗವಾಗಿ ಪ್ರತಿಕ್ರಿಯಿಸಿರಲಿಲ್ಲ. ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಶಿವಕುಮಾರ್ ಹೇಳಿಕೆಯನ್ನು ಸಾರಾಸಗಟಾಗಿ ತಳ್ಳಿಹಾಕಿರುವುದಲ್ಲದೆ, ಯಾವುದೇ ಅಧಿಕಾರ ಹಂಚಿಕೆ ಸೂತ್ರ ಆಗಿಲ್ಲ. ಪಕ್ಷದ ವರಿಷ್ಠರೂ ಸಹ ಇದುವರೆಗೂ ಅಧಿಕಾರ ಹಂಚಿಕೆ ಕುರಿತಂತೆ ಏನನ್ನೂ ಹೇಳಿಲ್ಲ, ಶಿವಕುಮಾರ್, ಯಾವ ರೀತಿ ಅರ್ಥೈಸಿ ಮಾತನಾಡಿದ್ದಾರೋ ತಿಳಿಯದು ಎಂದಿದ್ದಾರೆ.

ಆದರೆ, ಕಾಂಗ್ರೆಸ್ ವರಿಷ್ಠರು ಯಾವುದೇ ನಿರ್ಧಾರ ಕೈಗೊಂಡರೂ ನಾನು ಅದಕ್ಕೆ ತಲೆಬಾಗುತ್ತೇನೆ ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ.

# ಜಾರ್ಖಂಡ್ ಸಿಎಂ ಸೊರೆನ್‌ಗೆ ರಿಲೀಫ್



ರಾಂಚಿ, ಡಿ.4- ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೆನ್‌ಗೆ ಹೈಕೋರ್ಟ್ ರಾಂಚಿಯ ಸಂಸದ/ಶಾಸಕ ನ್ಯಾಯಾಲಯದ ಮುಂದೆ ಖುದ್ದು ಹಾಜರಾತಿಯಿಂದ ವಿನಾಯಿತಿ ನೀಡಿದೆ.

ಜಾರಿ ನಿರ್ದೇಶನಾಲಯದ ಸಮನ್ಸ್‌ಗಳನ್ನು ಪಾಲಿಸದ ಪ್ರಕರಣಕ್ಕೆ ಸಂಬಂಧಿಸಿದಂತೆ ಬುಧವಾರ ಸೊರೆನ್‌ಗೆ ಬಿಗ್ ರಿಲೀಫ್ ಸಿಕ್ಕಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಉತ್ತರ ನೀಡಲು ಜಾರಿ ನಿರ್ದೇಶನಾಲಯಕ್ಕೆ ನ್ಯಾಯಾಲಯ ಒಂದು ವಾರ ಕಾಲಾವಕಾಶ ನೀಡಿದೆ.

ಡಿಸೆಂಬರ್ 16 ರಂದು ಮತ್ತೆ ಪ್ರಕರಣದ ವಿಚಾರಣೆ ನಡೆಯಲಿದ್ದು, ಅಲ್ಲಿಯವರೆಗೆ ಸೊರೆನ್ ಅವರಿಗೆ ಸಂಸದ/ಶಾಸಕ ನ್ಯಾಯಾಲಯಕ್ಕೆ ಖುದ್ದು ಹಾಜರಾಗುವುದರಿಂದ ವಿನಾಯಿತಿ ನೀಡಲಾಗಿದೆ.

ಭೂ ಹಗರಣಕ್ಕೆ ಸಂಬಂಧಿಸಿದ ಮನಿ ಲಾಂಡರಿಂಗ್ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ತನಿಖಾ ಸಂಸ್ಥೆ ಹಲವಾರು ಬಾರಿ ಸಮನ್ಸ್ ನೀಡಿದ್ದರೂ ಅವರು ಹಾಜರಾಗದ ಕಾರಣ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಸೊರೆನ್ ವಿರುದ್ಧ ಇಡಿ ದೂರು ನೀಡಿತ್ತು.

ಡಿಸೆಂಬರ್ 4 ರಂದು ಖುದ್ದು ರಾಂಚಿಯ ಸಂಸದ/ಶಾಸಕ ನ್ಯಾಯಾಲಯಕ್ಕೆ ಹಾಜರಾಗುವಂತೆ ನ್ಯಾಯಾಲಯ ಜಾರ್ಖಂಡ್ ಸಿಎಂ ಸೊರೆನ್‌ಗೆ ಸೂಚಿಸಿತ್ತು.

ಆದರೆ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಸೊರೆನ್ ಅವರು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು ಮತ್ತು ಅಧಿಕೃತ ಬದ್ಧತೆಗಳು ಹಾಗೂ ನಿಗದಿತ ಕಾರ್ಯಕ್ರಮಗಳಿಂದಾಗಿ ವೈಯಕ್ತಿಕವಾಗಿ ಹಾಜರಾಗಲು ಸಾಧ್ಯವಾಗಿರಲಿಲ್ಲ ಎಂದು ಹೇಳಿದ್ದರು.

ಅರ್ಜಿದಾರರಿಗೆ ಏಳು ಸಮನ್ಸ್ ನೀಡಿದ್ದರೂ ಅವರು ಹಾಜರಾಗಿಲ್ಲ ಮತ್ತು ತನಿಖೆಗೆ ಸಹಕರಿಸುತ್ತಿಲ್ಲ ಎಂದು ಇಡಿ ನ್ಯಾಯಾಲಯದ ಮುಂದೆ ವಾದ ಮಂಡಿಸಿತ್ತು. ಆದರೆ ಇಡಿ ವಾದ ತಳ್ಳಿಹಾಕಿದ ಹೈಕೋರ್ಟ್, ಸೊರೆನ್ ಅವರಿಗೆ ಖುದ್ದು ಹಾಜರಾತಿಯಿಂದ ವಿನಾಯಿತಿ ನೀಡಿದೆ.

# ಆರ್ಚರಿ ಚಾಂಪಿಯನ್‌ಶಿಪ್‌ನಲ್ಲಿ ಹೊರಟಿ ಅಕಾಡೆಮಿ : ವೈಭವ್ ನಾಯ್ಕ್ ರಾಷ್ಟ್ರ ಮಟ್ಟಕ್ಕೆ





ವೈಭವ್ ನಾಯ್ಕ್

ದಾವಣಗೆರೆ, ಡಿ.4- ಬೆಂಗಳೂರಿನ ಬಿ.ಟಿ.ಎಂ. ಲೇಔಟ್‌ನ ಆರ್ಚಿಡ್ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಡಿಸೆಂಬರ್ 1 ರಂದು ನಡೆದ 8 ನೇ ರಾಜ್ಯ ಮಟ್ಟದ ಫೀಲ್ಡ್ ಇಂಡೋರ್ ಆರ್ಚರಿ ಚಾಂಪಿಯನ್‌ಶಿಪ್‌ನಲ್ಲಿ ಹೊರಟಿ ಕ್ರೀಡಾ ಅಕಾಡೆಮಿ ವಿದ್ಯಾರ್ಥಿಗಳು ಸ್ಪರ್ಧಿಸಿ, 4 ಬಂಗಾರದ ಪದಕಗಳು, 3 ಬೆಳ್ಳಿಯ ಪದಕಗಳು ಹಾಗೂ 2 ಕಂಚಿನ ಪದಕಗಳು ಗಳಿಸಿರುತ್ತಾರೆ.

**ವೈಭವ್ ನಾಯ್ಕ್ ರಾಷ್ಟ್ರ ಮಟ್ಟಕ್ಕೆ ಆಯ್ಕೆ :** ದಾವಣಗೆರೆ ಸಹಕಾರ ಅಭಿವೃದ್ಧಿ ಅಧಿಕಾರಿ ಸತೀಶ್ ನಾಯ್ಕ್ ಇವರ ಪುತ್ರ ವೈಭವ್ ನಾಯ್ಕ್ ಅವರು ಚಾಂಪಿಯನ್‌ಶಿಪ್‌ನಲ್ಲಿ ವಿಜೇತರಾಗಿ ಲಕ್ನೋನಲ್ಲಿ ನಡೆಯುವ ರಾಷ್ಟ್ರಮಟ್ಟದ ಆರ್ಚರಿ ಸ್ಪರ್ಧೆಗೆ ಆಯ್ಕೆಯಾಗಿನೆ.

ಸ್ಪರ್ಧೆಯಲ್ಲಿ ಭಾಗವಹಿಸಿ, ಜಯ ಗಳಿಸಿದ ವಿಜೇತರನ್ನು ಅಭಿನಂದಿಸಲಾಯಿತು.

# ಸಿಂಗ್ರಿಹಳ್ಳಿಯಲ್ಲಿ ಮಕ್ಕಳಿಗೆ ಸಮವಸ್ತ್ರ ವಿತರಣೆ



ಹರಪನಹಳ್ಳಿ, ಡಿ.4- ತಾಲ್ಲೂಕಿನ ಸಿಂಗ್ರಿಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಲ್.ಕೆ.ಜಿ. ಮತ್ತು ಯು.ಕೆ.ಜಿ. ತರಗತಿಗಳ 60 ಮಕ್ಕಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಿಂದ ಸಮವಸ್ತ್ರ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಎಸ್.ಡಿ.ಎಂ.ಸಿ. ಅಧ್ಯಕ್ಷ ಸಿ. ಹಾಲೇಶ್, ಉಪಾಧ್ಯಕ್ಷ, ಸರ್ವ ಸದಸ್ಯರು, ನಾಮ ನಿರ್ದೇಶಕರು, ಮುಖ್ಯೋಪಾಧ್ಯಾಯ ಕೃಷ್ಣಮೂರ್ತಿ, ಹಿರಿಯ ಶಿಕ್ಷಕ ಸಿ. ನೀಲಪ್ಪ, ಶಿಕ್ಷಕರು ಮತ್ತು ಶಿಕ್ಷಕಿಯರು, ಅತಿಥಿ ಶಿಕ್ಷಕಿಯರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಬಾಂಗ್ಲಾ : ದಾಳಿಗೆ ಖಂಡನೆ

**(1ನೇ ಪುಟದಿಂದ)** ಪರಿಗಣಿಸಿ ಎಚ್ಚೆತ್ತುಕೊಳ್ಳಬೇಕಿದೆ ಎಂದರು.

ಇಸ್ಕಾನ್ ದಾವಣಗೆರೆ ಘಟಕದ ಮುಖ್ಯಸ್ಥ ಅವಧೂತ ಚಂದ್ರದಾಸ ಗುರೂಜಿ, ಸಂಘದ ಪ್ರಮುಖರಾದ ರಾಮಚಂದ್ರ ವರುಣಬೈಲು, ಪ್ರವೀಣ್ ಎಬಿವಿಪಿ, ಅರುಣ್ ಗುಡ್ಡದಕೇರೆ, ಯೋಗೇಶ್ ಹೊಸಕೆರೆ, ಡಾ.ಎ.ಹೆಚ್. ಶಿವಯೋಗಿಸ್ವಾಮಿ, ಸತೀಶ್ ಪೂಜಾರಿ, ವಿಹೆಚ್‌ಪಿ ಜಿಲ್ಲಾ ಕಾರ್ಯದರ್ಶಿ ರಾಜು, ಎಂ.ದೊಡ್ಡಪ್ಪ, ಬೆಳ್ಳೂಡಿ ಮಂಜುನಾಥ್, ಎಸ್.ಆರ್. ಹೆಗಡೆ, ಕೆ.ಬಿ. ಶಂಕರನಾರಾಯಣ, ಹೆಚ್.ಪಿ. ರಾಜೇಶ್, ರಾಜಶೇಖರ್ ನಾಗಪ್ಪ, ಬಿ.ಜಿ. ಅಜಯ್ ಕುಮಾರ್, ಕೆ.ಎಂ. ಪ್ರಸನ್ನಕುಮಾರ್, ಎಸ್.ಟಿ. ವೀರೇಶ್, ಕೆ.ಎಂ. ವೀರೇಶ್, ರಾಜನಹಳ್ಳಿ ಶಿವಕುಮಾರ್, ಸಿದ್ಧಲಿಂಗ ಸ್ವಾಮಿ, ನಂದೀಶ್ ಬಳ್ಳಾರಿ, ಗುರುಬಸವರಾಜ್, ಶಿವಕುಮಾರ್, ಹೆಚ್.ಎನ್. ಶಿವಕುಮಾರ್, ಗೋಪಾಲಗೌಡ್ರು, ವೀರೇಶ್ ಹನಗವಾಡಿ, ವಿಶ್ವಾಸ್ ಇತರರು ವಕೀಲರಾದ ಬಸವರಾಜ್ ಉಚ್ಚಂಗಿದುರ್ಗ, ರಾಘೇಂದ್ರ, ರಂಗಸ್ವಾಮಿ, ನೀಲಕಂಠ ಸ್ವಾಮಿ, ಪ್ರತಿಟನೆಯಲ್ಲಿದ್ದರು.

# ರಾಜ್ಯಾಧ್ಯಕ್ಷರಾಗಿ ಡಾ. ರವೀಂದ್ರ

**(1ನೇ ಪುಟದಿಂದ)** ಪುರದಲ್ಲಿ ನಿನ್ನೆ ಏರ್ಪಾಡಾ ಗಿದ್ದ ರಾಜ್ಯ ನೇತ್ರ ತಜ್ಞರ ಸಮ್ಮೇಳನದ ಸಂದರ್ಭದಲ್ಲಿ ನಡೆದ ಸಂಸ್ಥೆಯ ಸಭೆಯಲ್ಲಿ ಈ ಆಯ್ಕೆ ನಡೆಯಿತು.

**ಪುರಸ್ಕಾರ:** ಸಮ್ಮೇಳನದಲ್ಲಿ ಕೊಡಮಾಡುವ ಪುರಸ್ಕಾರಕ್ಕೆ ಸ್ನಾತಕೋತ್ತರ ಪದವೀಧರರಾದ ಡಾ. ವರ್ಷ ವಿಲ್ಸನ್ (ಬೆಂಗಳೂರು) ಮತ್ತು ಡಾ. ಶ್ರೇಯಸ್ ನಲವಾಡ (ಬೆಳಗಾಂ) ಭಾಜನರಾಗಿದ್ದಾರೆ.

ಡಾ. ವರ್ಷ ವಿಲ್ಸನ್ ಅವರು ಅತ್ಯುತ್ತಮ ಪ್ರಬಂಧ ಮಂಡಿಸಿದ್ದು, ಅವರಿಗೆ ದಾವಣಗೆರೆಯ ನೇತ್ರ ತಜ್ಞ ಡಾ. ಬಿ.ಹೆಚ್. ಮಂಜುನಾಥ್ ಮಾರ್ಗದರ್ಶನ ನೀಡಿದ್ದಾರೆ. ಡಾ. ಶ್ರೇಯಸ್ ನಲವಾಡ್ ಅವರು ಟೀಚರ್ಸ್ ಆಫ್ ಟುಮಾರೋ ಕಾರ್ಯಕ್ರಮದಲ್ಲಿ ಪ್ರಥಮ ಬಹುಮಾನ ಪಡೆದಿದ್ದು ಅವರಿಗೆ ದಾವಣಗೆರೆಯ ನೇತ್ರ ತಜ್ಞ ಡಾ. ಎ.ಆರ್. ಸುರೇಶ್ ಮಾರ್ಗದರ್ಶನ ಮಾಡಿದ್ದರು.

**ದಾವಣಗೆರೆಯಲ್ಲಿ ನೇತ್ರ ಸಮ್ಮೇಳನ :** ಬರುವ 2025ನೇ ಸಾಲಿನ ಕರ್ನಾಟಕ ನೇತ್ರ ತಜ್ಞರ ಸಮ್ಮೇಳನವನ್ನು ದಾವಣಗೆರೆಯಲ್ಲಿ ಆಯೋಜಿಸಲು ಸಮ್ಮೇಳನದಲ್ಲಿ ಒಮ್ಮತದ ತೀರ್ಮಾನ ಕೈಗೊಳ್ಳಲಾಯಿತು. ಈ ಸಮ್ಮೇಳನದ ಅಧ್ಯಕ್ಷತೆಯನ್ನು ಡಾ. ರವೀಂದ್ರ ಬಣಕಾರ್ ವಹಿಸಲಿದ್ದಾರೆ.

# ಕೀಳು ಮಟ್ಟದ ಹೇಳಿಕೆ ತಕ್ಷಣ ನಿಲ್ಲಿಸಿ

**(1ನೇ ಪುಟದಿಂದ)** ಒಡೆಯುವ ಕೃತ್ಯವನ್ನು ಸಹಿಸುವುದಿಲ್ಲ. ಮಹಾಸಭೆಯ ಗೌರವಾಧ್ಯಕ್ಷ ಭೀಮಣ್ಣ ಖಂಡ್ರೆ, ಜನನಾಯಕ ಬಿ.ಎಸ್.ಯಡಿಯೂರಪ್ಪ ಮತ್ತು ನಾನು ಸಮಾಜಕ್ಕೆ ನೀಡಿರುವ ಕೊಡುಗೆಗಳನ್ನು ಅರಿತುಕೊಳ್ಳದೆ ಟೀಕೆ ಮಾಡುವುದು ಸರಿಯಲ್ಲ. ಮಹಾಸಭಾ ಟೀಕಿಸುವ ಮೊದಲು ನೀವು ಸಮಾಜಕ್ಕೆ ನೀಡಿರುವ ಕೊಡುಗೆ ಏನು ಎಂದವರು ಪ್ರಶ್ನಿಸಿದ್ದಾರೆ.

# ಲೋಕಾ-ಇಡಿ ವರದಿಯಲ್ಲಿ ಭಿನ್ನತೆ

**(1ನೇ ಪುಟದಿಂದ)** ನಿವೇಶನಗಳನ್ನು ಮುಡಾ ಅಕ್ರಮವಾಗಿ ಮಂಜೂರು ಮಾಡಿ 700 ಕೋಟಿ ರೂ.ಗಳಷ್ಟು ಅವ್ಯವಹಾರಕ್ಕೆ ಕಾರಣವಾಗಿದೆ ಎಂದು ಲೋಕಾ ಯುಕ್ತಕ್ಕೆ ಇ.ಡಿ. ಮಾಹಿತಿ ನೀಡಿದೆ.

ಈ ಮಧ್ಯೆ, ಇ.ಡಿ. ಹಾಗೂ ಲೋಕಾಯುಕ್ತ ಪ್ರತ್ಯೇಕವಾಗಿ ನಡೆಸಿರುವ ತನಿಖಾ ವರದಿಯಲ್ಲಿ ಮೇಲ್ನೋಟಕ್ಕೆ ಭಿನ್ನತೆ ಕಂಡುಬರುತ್ತಿದೆ. ಲೋಕಾಯುಕ್ತವು ನ್ಯಾಯಾಲಯಕ್ಕೆ ತನ್ನ ವರದಿ ಸಲ್ಲಿಸುವ ಮುನ್ನ ಇ.ಡಿ. ನೀಡಿರುವ ಮಾಹಿತಿಯನ್ನು ಪರಿಗಣಿಸುವುದೇ, ಇಲ್ಲವೇ ಎಂಬುದು ಈಗಿನ ವಿಷಯ.


**ಡ್ರೈವರ್ ಬೇಕಾಗಿದ್ದಾರೆ**
ಕಾರ್/ಇನೋವಾದಲ್ಲಿ ಅನುಭವವಿರುವ, ಲೈಸೆನ್ಸ್ ಹೊಂದಿರುವವರು ಸಂಪರ್ಕಿಸಿ
ಬೆಳಗ್ಗೆ 11.30 ರಿಂದ 2.00ರವರೆಗೆ
08192 254736

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿ 120 ಅಡಿ ರಸ್ತೆ ಹಿಂಭಾಗ 40x60 ಸೌತ್ 40 ಅಡಿ ರಸ್ತೆಗೆ
ಓನರ್ :
96633 35235
ಮಧ್ಯವರ್ತಿಗಳಿಗೆ ಅವಕಾಶ ಇಲ್ಲ

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 North, 40x60 North, 120 ಅಡಿ ರೋಡ್‌ಗಿದೆ. 40x60 North, 40x60 East, 40x60 West
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ವೀರಶೈವ ಖಾನಾವಳಿ**
ಕ್ಲೀನಿಂಗ್ ಅಂಡ್ ಸಪ್ಲೈಯರ್
ಕೆಲಸಕ್ಕೆ ಬೇಕಾಗಿದ್ದಾರೆ
99017 70830
99458 29046

**WANTED JOBS**
We are hiring telecallers females only. Basic Salary & Incentives.
Quali : PUC and Any Degree.
Location : Dvg. Walk In Interview
05.12.2024 to 10.12.2024
99001 57398, 90663 32625

**ಮನೆ ಮಾರಾಟಕ್ಕಿದೆ**
ಚಿಕ್ಕನಹಳ್ಳಿ ಬಡಾವಣೆಯಲ್ಲಿ 15x40 RCC ಮನೆ ಮಾರಾಟಕ್ಕಿದೆ.
ಆಂಜನೇಯ ಬಡಾವಣೆಯಲ್ಲಿ ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ.
94486 55850

**ಫ್ಲಾಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ಸಿಟಿ ಎಸ್.ಎಸ್. ಬಡಾವಣೆ, ಎ ಬ್ಲಾಕ್, ಇಂಡೋರ್ ಸ್ಟೇಡಿಯಂ ಹತ್ತಿರ ನಿರ್ಮಿಸಿರತಕ್ಕ ಅಪಾರ್ಟ್‌ಮೆಂಟ್‌ನಲ್ಲಿ 2 BHK, ಗ್ರಾನೈಟ್ ಫ್ಲೋರಿಂಗ್, ವಾರ್ಡ್‌ರೂಪ್, ದೇವರಮನೆ, ನೀರಿನ ಸೌಕರ್ಯ, ಲಿಫ್ಟ್ ಸೌಕರ್ಯ, ಕಾರ್ ಪಾರ್ಕಿಂಗ್ ಸೌಲಭ್ಯವುಳ್ಳ ಫ್ಲಾಟ್‌ಗಳು ರಿಯಾಯ್ತಿ ದರದಲ್ಲಿ ಮಾರಾಟಕ್ಕಿವೆ
98440 65710

**ಡ್ರೈವರ್ ಬೇಕು**
ಕಾರ್ ಡ್ರೈವರ್ ಬೇಕಾಗಿದ್ದಾರೆ.
ಸಂಪರ್ಕಿಸಿ : ರೇಣುಕ ಮಂದಿರ
ಪಿ.ಬಿ. ರಸ್ತೆ, ದಾವಣಗೆರೆ.
ಭೇಟಿ ಸಮಯ : ಸಂಜೆ 7 ರಿಂದ 9

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ – ವಸ್ತು, ಲೋಪ, ದೋಷ, ಗುಣಮಟ್ಟ, ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ ಸೈಟುಗಳು ಮಾರಾಟಕ್ಕಿವೆ. 40x60, 40x60 North ಅಕ್ಕ-ಪಕ್ಕ, 40 ಅಡಿ ರೋಡ್‌ಗಿದೆ. 30x45 East, 30x40 North, 30x55 North, 30x45 ಕಾರ್ನರ್
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಬೇಕಾಗಿದ್ದಾರೆ**
ದಾವಣಗೆರೆಯಿಂದ 18 ಕಿಮೀ ದೂರದಲ್ಲಿರುವ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು ಸಪ್ಲೈಯರ್ ಬೇಕಾಗಿದ್ದಾರೆ.
94483 38709, 74830 48533

**ಬೇಕಾಗಿದ್ದಾರೆ**
ಫೈನಾನ್ಸಿಯಲ್ ಕಂಪನಿಯಲ್ಲಿ ಮಾರ್ಕೆಟಿಂಗ್ ಆಫೀಸರ್ ಹುದ್ದೆಗೆ ಕೆಲಸಕ್ಕೆ ಬೇಕಾಗಿದ್ದಾರೆ.
ವಿದ್ಯಾರ್ಹತೆ ಅವಶ್ಯಕತೆ ಇರುವುದಿಲ್ಲ.
73385 80345

**ಮನೆ ಬಾಡಿಗೆಗಿದೆ**
ಶಿವಕುಮಾರಸ್ವಾಮಿ ಬಡಾವಣೆ, ಮೊದಲನೇ ಹಂತ, ಶಿವವಿನಾಯಕ ದೇವಸ್ಥಾನದ ಹತ್ತಿರ ಮೊದಲನೇ ಮಹಡಿ 4BHK ಮನೆ ಬಾಡಿಗೆಗೆ ಮತ್ತು 1BHK.
94802 82894, 88840 40911

**WANTED**
Boys required for billing work at
Food Mart Supermarket
Quali : Any Degree
Mob : 9886463531

**HOUSES FOR RENT**
1BHK, 2BHK,
MCC Block, SS Layout 'A' & 'B' Block, Anjaneya Badavane Vidyanagara, Siddaveerappa layout.
Dakshit Iynahalli
96061 26471

**ಮನೆ ಮಾರಾಟಕ್ಕಿದೆ**
ದಾವಣಗೆರೆ ಪಿಜೆ ಬಡಾವಣೆ, 2ನೇ ಮೇನ್, 1ನೇ ಕ್ರಾಸ್, ರೈತರ ಬೀದಿಯಲ್ಲಿರುವ ಅಳತೆ 30x90 ಜಾಗದಲ್ಲಿ ಒಂದು ಅಂತಸ್ತಿನ ಮನೆ ಮತ್ತು 2 ಔಟ್‌ಹೌಸ್ ಇರುವ ಮನೆ ಮಾರಾಟಕ್ಕಿದೆ.
90363 51267
99646 92436

**ಬೇಕಾಗಿದ್ದಾರೆ**
ಆರ್ಡರ್ ಬುಕ್ಕಿಂಗ್ / ಸ್ವವಿವರದೊಂದಿಗೆ ಸಂಪರ್ಕಿಸಿ
ಎ.ಕೆ. ಟ್ರೇಡರ್ಸ್
ಬಾಪೂಜಿ ಆಸ್ಪತ್ರೆ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

**ಬೇಕಾಗಿದ್ದಾರೆ**
ಮನೆ ಕೆಲಸ ಮಾಡಲು ಹೆಣ್ಣುಮಕ್ಕಳು ಬೇಕಾಗಿದ್ದಾರೆ.
ಬೆಳಿಗ್ಗೆ 10 ರಿಂದ 12ರವರೆಗೆ.
63639 54459

**TUITIONS**
IGCSE, ICSE, CBSE and State Board from class 5th to 12th MCC 'A' blcok, Davangere.
98444 92888

**ಸಾಲಗಳಿಗಾಗಿ ಸಂಪರ್ಕಿಸಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ ಮತ್ತು ಮನೆ ಕಟ್ಟಲು ಫೈನಾನ್ಸ್ ಕಂಪನಿಯಲ್ಲಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಅತೀ ಕಡಿಮೆ ಬಡ್ಡಿದರದಲ್ಲಿ ಸಾಲ ವರ್ಗಾವಣೆ ಮಾಡಿಕೊಡಲಾಗುವುದು.
73385 80345, 99455 22287

**ಚೈನೀಸ್ ಕುಕ್ ಬೇಕಾಗಿದ್ದಾರೆ**
ಬಿಐಇಟಿ ರೋಡ್ ದಾವಣಗೆರೆ. ಸಂಪರ್ಕಿಸಿ :
63615 88497
81232 15143

**aagey.com** Surge ahead
WE'R HIRING@ DAVANGERE
DIGITAL MARKETING EXECUTIVE
WALK IN INTERVIEW
DEC 1ST TO 31ST 2024
MEET MR VIJAY KUMAR
10 AM - 6PM
7892994180
aagey.com
Akshay Arcade Complex 6th Main 3rd cross MCC A block Davangere 577004
REQUIREMENT:
- Requires a MBA degree in Marketing
- Freshers
- Strong Creative skills, teamwork, and adaptability
+91-81051 00005 hr@aagey.com www.aagey.com

**ಉಚಿತ ಕಂಪ್ಯೂಟರ್ ಕೋರ್ಸ್**
ಕಂಪ್ಯೂಟರ್ ಬೇಸಿಕ್ ಕೋರ್ಸ್ ಅನ್ನು ಉಚಿತವಾಗಿ ಕಲಿಯಿರಿ ಹಾಗೂ MS Office, Typing Q, Tally Prime ಕೋರ್ಸ್‌ಗಳನ್ನು ಕೈಗೆಟಕುವ ದರದಲ್ಲಿ ಕಲಿಯಿರಿ. Limited Seats Only.
Radar Computer Center
PJ Extn., Near Byadagi Shetru School.
81500 82897, 91108 97420

**ಬೇಕಾಗಿದ್ದಾರೆ**
ಮನೆಯ ಅಡುಗೆ ಕೆಲಸಕ್ಕೆ ಅನುಭವವುಳ್ಳ ಲಿಂಗಾಯತ ಮಹಿಳೆ ಬೇಕಾಗಿದ್ದಾರೆ. ವಿದ್ಯಾನಗರ, ಕಾಫಿ ಡೇ ಹತ್ತಿರ, ದಾವಣಗೆರೆ.
99457 64377, 9449973956

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
ಕೆಲಸಕ್ಕೆ ಬೇಕಾಗಿದ್ದಾರೆ
ಶ್ರೀಸಾಯಿ ಎಗ್ ಸೆಂಟರ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ
96860 22969

**WANTED**
ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ.
SRI PRIYA CAR CARE,
Vidyanagara, Davanagere.
95381 96395
94495 49806, 94486 39815

**ವೈನ್ ಶಾಪ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ**
ಶಾಮನೂರು ರೋಡ್, ದಾವಣಗೆರೆ.
98861 66432

**TUITIONS**
CBSE / ICSE Boards Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**ಬೇಕಾಗಿದ್ದಾರೆ**
ಮೈಲಾರ ಲಿಂಗೇಶ್ವರ ನಗರ ಸಾರಿಗೆಗೆ ಡ್ರೈವರ್ ಮತ್ತು ಮಹಿಳಾ ಕಂಡಕ್ಟರ್ ಬೇಕಾಗಿದ್ದಾರೆ.
94484 42999
98448 42189

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಮೂಲ ಪತ್ರ ಕಳೆದಿದೆ**
ಶಿರಮಗೊಂಡನಹಳ್ಳಿ ಗ್ರಾಮದ ರೀ ಸರ್ವೆ ನಂ. 76/24 ಮುಕ್ಕಾಲು ಗುಂಟೆ ಖಾಲಿ ನಿವೇಶನದ ಪತ್ರ ದಿ.: 20.9.2024 ರಂದು ಬೈಕಲ್ಲಿ ಬರುವಾಗ ಕಳೆದುಹೋಗಿರುತ್ತದೆ. ಯಾರಿಗಾದರು ಸಿಕ್ಕಲ್ಲಿ ದಯವಿಟ್ಟು ಈ ಫೋನ್ ನಂಬರ್‌ಗೆ ತಿಳಿಸಿ.
ಜಿ.ಇ. ಷಣ್ಮುಖಪ್ಪ
99016 89924

**ಮ್ಯಾನೇಜರ್ ಬೇಕಾಗಿದ್ದಾರೆ**
ಪೇಂಟ್ ಅಂಗಡಿಯಲ್ಲಿ ಕೆಲಸ ಮಾಡಲು ಮ್ಯಾನೇಜರ್ ಬೇಕಾಗಿದ್ದಾರೆ. ಆಧಾರ್ ಕಾರ್ಡ್ ಜೆರಾಕ್ಸ್, ಪಾಸ್ ಪೋರ್ಟ್ ಸೈಜ್ ಫೋಟೋದೊಂದಿಗೆ ಸಂಪರ್ಕಿಸಿ : ಚನ್ನಗಿರಿ ವಿರೂಪಾಕ್ಷಪ್ಪ ಕಲ್ಯಾಣ ಮಂಟಪ ಗಡಿಯಾರ ಕಂಬದ ಎದುರು, ರೈಲ್ವೆ ಸ್ಟೇಷನ್ ರಸ್ತೆ, ದಾವಣಗೆರೆ.

**Manager / Executive**
Male or Female
89700 66666

## ನಗರದಲ್ಲಿ ಇಂದು ಕಸಾಪದಿಂದ ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಕುರಿತು ದತ್ತಿ

ತಾಲ್ಲೂಕು ಕಸಾಪ ವತಿಯಿಂದ ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮ ಕುರುಬರ ಕೇರಿ, ಕಾಳಿಕಾದೇವಿ ರಸ್ತೆಯಲ್ಲಿನ ಪದ್ಮಭೂಷಣ ಡಾ|| ರಾಜಕುಮಾರ್ ಪ್ರೌಢಶಾಲೆ ಆವರಣದಲ್ಲಿ ಇಂದು ಮಧ್ಯಾಹ್ನ 3 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಕುರಿತು ಜಿ.ಪಂ.ನ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಮಹೇಶಪ್ಪ ದೊಡ್ಡಮನಿ ಉಪನ್ಯಾಸ ನೀಡಲಿದ್ದಾರೆ.

ಶಾಲೆಯ ಮುಖ್ಯೋಪಾಧ್ಯಾಯ ಸಾರಂಗಮಠದ ಗುರುಬಸವರಾಜೇಂದ್ರ ಅಧ್ಯಕ್ಷತೆ ವಹಿಸುವರು. ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ, ನಿರ್ದೇಶಕರಾದ ಶ್ರೀಮತಿ ಪರಿಮಳ ಜಗದೀಶ್, ಶ್ರೀಮತಿ ಕೆ.ಜಿ. ಸೌಭಾಗ್ಯ, ರಟ್ಟೀಹಳ್ಳಿ ಶಿವಕುಮಾರ್ ಮುಖ್ಯ ಅತಿಥಿಗಳಾಗಿ ಆಗಮಿಸುವರು. ತಾ|| ಕಸಾಪ ನಿರ್ದೇಶಕ ಷಡಕ್ಷರಪ್ಪ ಎಂ. ಬೇತೂರು ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ.

ದತ್ತಿ ದಾನಿಗಳು: ಶ್ರೀಮತಿ ನಾರಾಯಣಮ್ಮ ಕೆಂಪರೆಡ್ಡಿ ಸ್ಮಾರಕ, ಶ್ರೀ ಅಮರನಾರಾಯಣ ಬೆಂಗಳೂರು, ಆನೆಕೊಂಡದ ರೇವಕ್ಕಳ ಲಕ್ಕಮ್ಮ ಎ.ಆರ್. ಬಸಪ್ಪ, ಶ್ರೀಮತಿ ನಾಗಮ್ಮ ಉಜ್ಜನಪ್ಪ ಎ.ಆರ್., ದಾವಣಗೆರೆ, ಸಂಗನಬಸವ ನೆಶ್ವಿ, ವಿದ್ಯಾನಗರ, ದಾವಣಗೆರೆ.

## ಇನ್ಫೋಸಿಸ್‌ನಲ್ಲಿ ಚರ್ಚೆ : ಐಡಾ ಲವ್ಲೇಸ್ ಸಾಫ್ಟ್‌ವೇರ್ ಕಂಪನಿಗೆ ಆಹ್ವಾನ



ದಾವಣಗೆರೆ, ಡಿ. 4 - ಸಾಫ್ಟ್‌ವೇರ್ ದಿಗ್ಗಜ ಬೆಂಗಳೂರಿನ ಇನ್ಫೋಸಿಸ್ ಕ್ಯಾಂಪಸ್‌ನಲ್ಲಿ ಇಂದಿನಿಂದ ಆರಂಭಗೊಳ್ಳಲಿರುವ 2 ದಿನಗಳ ಯುಕೆ-ಭಾರತ ಸಹಕಾರ-ಸಂವಾದ ಚರ್ಚೆಯಲ್ಲಿ ಭಾಗವಹಿಸಲು ದಾವಣಗೆರೆಯ ಐಡಾ ಲವ್ಲೇಸ್ ಸಾಫ್ಟ್‌ವೇರ್ ಕಂಪನಿಗೆ ಆಹ್ವಾನ ನೀಡಲಾಗಿದೆ ಎಂದು ಕಂಪನಿಯ ನಿರ್ದೇಶಕರಾದ ಎಲ್. ಶಿಲ್ಪಾ ತಿಳಿಸಿದ್ದಾರೆ. ಸಮಾನ ಮತ್ತು ಆಧಾರ ರಹಿತ ಆರ್ಟಿಫಿಷಿಯಲ್ ಇಂಟಲಿಜೆನ್ಸ್ ಪರಿಹಾರಗಳ ಮೇಲೆ ಕೇಂದ್ರೀಕರಿಸುವ ಮೂಲಕ ನೈಜ ಪ್ರಪಂಚದ ಸಮಸ್ಯೆಗಳನ್ನು ಪರಿಹರಿಸಲು ಮತ್ತು ನಾವೀನ್ಯತೆಗಳನ್ನು ಉತ್ತೇಜಿಸುವ ಕಾರ್ಯಾಗಾರದಲ್ಲಿ ಚರ್ಚೆ-ಸಂವಾದಗಳು ನಡೆಯಲಿವೆ ಎಂದು ಅವರು ಹೇಳಿದ್ದಾರೆ.

ಐಡಾ ಲವ್ಲೇಸ್ ಸಾಫ್ಟ್‌ವೇರ್ ಕಂಪನಿಗೆ ಈ ವರ್ಷದ ಆರಂಭದಲ್ಲಿ ಕೇಂದ್ರ ಎಲೆಕ್ಟ್ರಾನಿಕ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ದೊಡ್ಡ ಮೊತ್ತದ ಅನುದಾನ ಮತ್ತು ಪ್ರಶಂಸನಾ ಪತ್ರ ನೀಡಿತ್ತು. ನವದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಶಿಲ್ಪಾ ಪುರಸ್ಕಾರ ಸ್ವೀಕರಿಸಿದ್ದರು.

## ಜ್ಯೋತಿಷ್ಯ ಕೋರ್ಸ್ : ಭಾಸ್ಕರಾಚಾರ್ಯ ಜ್ಯೋತಿರ್ವಿದ್ಯಾ ಪ್ರತಿಷ್ಠಾನಕ್ಕೆ ಶೇ. 100



ದಾವಣಗೆರೆ, ಡಿ.4- ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಕಳೆದ ಅಕ್ಟೋಬರ್‌ನಲ್ಲಿ ನಡೆಸಿದ ಜ್ಯೋತಿಷ್ಯ ಸರ್ಟಿಫಿಕೇಟ್ ಕೋರ್ಸ್ ಪರೀಕ್ಷೆಯಲ್ಲಿ ನಗರದ ಶ್ರೀ ಭಾಸ್ಕರಾಚಾರ್ಯ ಜ್ಯೋತಿರ್ವಿದ್ಯಾ ಪ್ರತಿಷ್ಠಾನಕ್ಕೆ ಶೇ.100 ರಷ್ಟು ಫಲಿತಾಂಶ ಬಂದಿದೆ. ಪರೀಕ್ಷೆ ಬರೆದ ವಿದ್ಯಾರ್ಥಿಗಳಲ್ಲಿ ಮೂವರು ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು, ಎಸ್.ಜಿ. ನಾಗರಾಜ್ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದಿದ್ದಾರೆ ಎಂದು ಪ್ರಾಂಶುಪಾಲ ಆರ್. ಬಿ. ಪ್ರವೀಣಕುಮಾರ್ (99640 62223) ತಿಳಿಸಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಆಡಳಿತ ಮಂಡಳಿಯ ಅಧ್ಯಕ್ಷ ಎಂ. ಗದಿಗೆಪ್ಪಯ್ಯ, ಕಾರ್ಯದರ್ಶಿ ಸಿ.ಕೆ. ಆನಂದತೀರ್ಥಾಚಾರ್ ಸಂತಸ ವ್ಯಕ್ತಪಡಿಸಿದ್ದಾರೆ.

# ಆಟೋರಿಕ್ಷಾಗಳಿಗೆ ಮೀಟರ್ ಅಳವಡಿಸಲು ವಾರದ ಗಡುವು

ದಾವಣಗೆರೆ, ನ. 4- ಮಹಾನಗರ ಪಾಲಿಕೆ ವ್ಯಾಪ್ತಿಯ ಆಟೋರಿಕ್ಷಾಗಳು ಮೀಟರ್ ಅಳವಡಿಕೆ ಮೂಲಕ ಪ್ರಯಾಣಿಕರ ಸೇವೆಗೆ ಸಜ್ಜಾಗುವಂತೆ ಒಂದು ವಾರದ ಗಡುವು ನೀಡಲಾಗಿದೆ.

ಗಡುವು ನಂತರ ಮೀಟರ್ ಅಳವಡಿಕೆ ಮಾಡದೇ ಇರುವ ಆಟೋಗಳ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳಲು ನಗರದ ಜಿಲ್ಲಾ ಸಶಸ್ತ್ರ ಮೀಸಲು ಪೊಲೀಸ್ ಪಡೆಯ ಮೈದಾನದಲ್ಲಿ ಆಟೋ ಚಾಲಕರು ಮತ್ತು ಮಾಲೀಕರ ಜೊತೆ ಪೊಲೀಸ್ ಇಲಾಖೆ ನಿನ್ನೆ ಆಯೋಜಿಸಿದ್ದ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಯಿತು.

ಸಭೆಯಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಡಾ. ಜಿ.ಎನ್. ಗಂಗಾಧರಸ್ವಾಮಿ, ಆಟೋಗಳು ಕಡ್ಡಾಯವಾಗಿ ಮೀಟರ್ ಅಳವಡಿಸಿಕೊಳ್ಳಬೇಕು. ಮೀಟರ್ ಆಧಾರದ ಮೇರೆಗೆ ಬಾಡಿಗೆ ನಿಗದಿಪಡಿಸಬೇಕು. ನಿಗದಿತ ಕಾಲ ಮಿತಿಯೊಳಗೆ ಮೀಟರ್ ಅಳವಡಿಸಿಕೊಳ್ಳದಿದ್ದರೆ ತೊಂದರೆ ಅನುಭವಿಸುವುದು ನಿಶ್ಚಿತ. ನಿಯಮ ಉಲ್ಲಂಘಿಸಿದವರಿಗೆ ಐದು ಸಾವಿರದವರೆಗೂ ದಂಡ ವಿಧಿಸಲು ಅವಕಾಶವಿದೆ. ಚಾಲಕರಿಗೆ ತೊಂದರೆ ಕೊಡುವ ಉದ್ದೇಶ ನಮ್ಮದಲ್ಲ ಎಂದರು.



ನಗರ ಸಾರಿಗೆಯನ್ನು ಮತ್ತಷ್ಟು ಬಲಗೊಳಿಸುವ ಉದ್ದೇಶವಿದ್ದು, ನಿಮ್ಮ ಹೊಟ್ಟೆಯ ಮೇಲೆ ಹೊಡೆಯಲು ನಾವು ಸಿದ್ಧರಿಲ್ಲ. ಆಟೋ ನಿಲ್ದಾಣಗಳಿಗೆ ಸ್ಥಳ ನಿಗದಿಪಡಿಸಲು ಮಹಾ ನಗರ ಪಾಲಿಕೆ ಆಯುಕ್ತರಾದ ರೇಣುಕ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗುವುದು. ಈ ಸಮಿತಿ ಶಿಫಾರಸ್ಸು ಆಧರಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕೇವಲ ಐದು ಅಧಿಕೃತ ಆಟೋ ನಿಲ್ದಾಣಗಳಿವೆ: ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೇವಲ ಐದು ಆಟೋ ನಿಲ್ದಾಣಗಳು ಮಾತ್ರ ಅಧಿಕೃತವಾಗಿವೆ. 50 ಕ್ಕೂ ಹೆಚ್ಚು ಆಟೋ ನಿಲ್ದಾಣಗಳು ಅನಧಿಕೃತವಾಗಿವೆ. ಎಲ್ಲೆಂದರಲ್ಲಿ ಆಟೋ ನಿಲ್ದಾಣಗಳಿದ್ದು, ಇದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿದೆ. ನಿಲ್ದಾಣಕ್ಕೆ ನಿಗದಿಪಡಿಸಿದ ಮಾರ್ಗಸೂಚಿಗಳನ್ನು ಗಾಳಿಗೆ ತೂರಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಹೇಳಿದರು.

ಜಿಲ್ಲೆಯಲ್ಲಿ ಹದಿನೈದು ವರ್ಷ ಮೇಲ್ಪಟ್ಟ ಆರು ಸಾವಿರಕ್ಕೂ ಅಧಿಕ ಆಟೋಗಳು ಇರುವ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಚೇರಿಯ ಮಾಹಿತಿ ಇದೆ. ಸುಸ್ಥಿತಿ ಕಳೆದುಕೊಂಡಿರುವ ಈ ಆಟೋಗಳ ಸಂಖ್ಯೆ ನಗರ ವ್ಯಾಪ್ತಿಯಲ್ಲಿ ಹೆಚ್ಚಾಗಿದೆ ಎಂದರು.

ಮೀಟರ್, ಸುಸ್ಥಿತಿ ಪ್ರಮಾಣ ಪತ್ರ ಸೇರಿದಂತೆ ಅಗತ್ಯ ನಿಯಮಗಳನ್ನು ಪಾಲಿಸಬೇಕು. ಇಲ್ಲವಾದರೆ ದಂಡ ಖಂಡಿತ ಎಂದು ಹೇಳಿದರು.

**ಪ್ರೀಪೇಯ್ಡ್ ಆಟೋ ಸೇವೆಗೆ ಚಿಂತನೆ:** ರೈಲ್ವೆ ನಿಲ್ದಾಣದ ಬಳಿ ಮುಂಗಡ ಪಾವತಿ (ಪ್ರೀಪೇಯ್ಡ್) ಆಟೋ ಸೇವೆ ನೀಡುವ ಚಿಂತನೆ ಮಾಡಲಾಗಿದೆ. ಇದು ಶೀಘ್ರದಲ್ಲಿಯೇ ಅನುಷ್ಠಾನಕ್ಕೆ ಬರಲಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಮಾಹಿತಿ ನೀಡಿದರು.

**524 ಕ್ಯಾಮೆರಾ ಅಳವಡಿಕೆ:** ಮಹಾ ನಗರ ಪಾಲಿಕೆ ವ್ಯಾಪ್ತಿಯಲ್ಲಿ 524 ಸಿಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಸಂಚಾರ ನಿಯಮ ಉಲ್ಲಂಘಿಸುವ ವಾಹನಗಳ ಮೇಲೆ ಈ ಕ್ಯಾಮೆರಾಗಳು ನಿಗಾ ವಹಿಸುತ್ತವೆ. ಕಮಾಂಡರ್ ಕಂಟ್ರೋಲ್ ಸೆಂಟರ್‌ನಿಂದ ಕ್ಯಾಮೆರಾಗಳನ್ನು ನಿಯಂತ್ರಿಸುವ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ಸ್ಮಾರ್ಟ್ ಸಿಟಿ ಯೋಜನೆಯ ಐಟಿ ವಿಭಾಗದ ಡಿಜಿಎಂ ಮಮತಾ ಅವರು ಮಾಹಿತಿ ನೀಡಿದರು.

ಏಕ ಕಾಲಕ್ಕೆ ಹತ್ತು ವಾಹನಗಳನ್ನು ಮತ್ತು ಗಂಟೆಗೆ 149 ಕಿಮೀ ವೇಗದಲ್ಲಿ ಸಂಚರಿಸುವ ವಾಹನಗಳ ಸಂಖ್ಯಾ ಫಲಕ ಸೇರಿದಂತೆ ಇತರ ಮಾಹಿತಿ ಸಂಗ್ರಹಿಸುವ ಸಾಮರ್ಥ್ಯವನ್ನು ಈ ಕ್ಯಾಮೆರಾಗಳು ಹೊಂದಿವೆ. ಪಾಲಿಕೆ ವ್ಯಾಪ್ತಿಯಲ್ಲಿ ಎಲ್ಲೇ ಸಂಚಾರ ನಿಯಮ ಉಲ್ಲಂಘಿಸಿದರೂ ಸಿಕ್ಕಿ ಬೀಳುವುದು ಗ್ಯಾರಂಟಿ ಎಂದು ಹೇಳಿದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವಿಜಯಕುಮಾರ್ ಎಂ. ಸಂತೋಷ್, ಜಿ. ಮಂಜುನಾಥ್, ಡಿವೈಎಸ್ಪಿ ಮಲ್ಲೇಶ್ ದೊಡ್ಡಮನಿ, ಪಾಲಿಕೆ ಆಯುಕ್ತೆ ರೇಣುಕಾ, ಪ್ರಾದೇಶಿಕ ಸಾರಿಗೆ ಅಧಿಕಾರಿ ಪ್ರಮುಥೇಶ್, ಕೆಎಸ್‌ಆರ್‌ಟಿಸಿ ಡಿಸಿ ಸಿದ್ದೇಶ್ವರ್, ಸ್ಮಾರ್ಟ್ ಸಿಟಿ ಯೋಜನೆ ಎಂಡಿ ವೀರೇಶ್ ಕುಮಾರ್, ಬೆಸ್ಕಾಂ ಎಇಇ ಚಂದ್ರಾನಾಯ್ಕ, ಪಿಡಬ್ಲ್ಯೂಡಿ ಇಲಾಖೆ ಎಇಇ ಸಿ. ಕುಮಾರ್, ಕೆಎಸ್‌ಪಿಎಸ್ ಡಿವೈಎಸ್ಪಿ ಪಿ.ಬಿ. ಪ್ರಕಾಶ್ ಉಪಸ್ಥಿತರಿದ್ದರು.

# ವಿಕಲಚೇತನರ ಕಲ್ಯಾಣಕ್ಕಾಗಿ ಡಾ. ಸುರೇಶ್ ಹನಗವಾಡಿಗೆ ರಾಷ್ಟ್ರಪ್ರಶಸ್ತಿ



ದಾವಣಗೆರೆ, ಡಿ.4- ನಗರದಲ್ಲಿರುವ ಕರ್ನಾಟಕ ಹಿಮೋಫಿಲಿಯಾ ಸೊಸೈಟಿಯ ಸಂಸ್ಥಾಪಕ ಡಾ. ಸುರೇಶ್ ಹನಗವಾಡಿ ಅವರು ಜೆ.ಜೆ.ಎಂ.ಮೆಡಿಕಲ್ ಕಾಲೇಜಿನ ಪೆಥಾಲಜಿ ವಿಭಾಗದ ಪ್ರಾಧ್ಯಾಪಕರಾಗಿದ್ದು, ಸ್ವತಃ ತಾವೇ ಹಿಮೋಫಿಲಿಯಾ ಬಾಧಿತರಾಗಿದ್ದಾರೆ.

ಡಾ. ಸುರೇಶ್ ಹನಗವಾಡಿ ಅವರು, ಹಿಮೋಫಿಲಿಯಾ, ಥಲಸ್ಸೇಮಿಯಾ ಮತ್ತು ಇತರೆ ವಿರಳ ರಕ್ತ ರೋಗಗಳ ಬಗ್ಗೆ ಕಳೆದ 35 ವರ್ಷಗಳಿಂದ ಅಧ್ಯಯನ ಮಾಡಿ ದೇಶ್ಯಾದಂತ ಸಂಚರಿಸಿ ರೋಗಿಗಳ ಕಷ್ಟಕಾರ್ಪಣ್ಯ ಆಲಿಸಿ ದುಬಾರಿ ಚಿಕಿತ್ಸೆಯನ್ನು ಸರ್ಕಾರದಿಂದ ಜಿಲ್ಲಾ ಆಸ್ಪತ್ರೆಗಳಲ್ಲಿ ಉಚಿತವಾಗಿ ಪೂರೈಕೆಯಾಗುವಂತೆ ಹೋರಾಟ ಮಾಡಿ ಯಶಸ್ಸು ಕಂಡಿದ್ದಾರೆ.

ಭಾರತ ಸರ್ಕಾರವು ಈ ಅನನ್ಯ ಸೇವೆಯನ್ನು ಪರಿಗಣಿಸಿ 2024-25ನೇ ಸಾಲಿನ 'ಶ್ರೇಷ್ಠ ದಿವ್ಯಾಂಗನ' ರಾಷ್ಟ್ರ ಪ್ರಶಸ್ತಿಗೆ ಆಯ್ಕೆ ಮಾಡಿದ್ದು, ವಿಕಲಚೇತನರ ದಿನಾಚರಣೆಯಾದ ಡಿಸೆಂಬರ್ 3 ರಂದು ನವದೆಹಲಿಯಲ್ಲಿ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮ ಪ್ರಶಸ್ತಿ ನೀಡಿ ಪುರಸ್ಕರಿಸಿದರು.

ಕರ್ನಾಟಕ ಹಿಮೋಫಿಲಿಯಾ ಸೊಸೈಟಿಯ ಅಧ್ಯಕ್ಷ ಡಾ. ಸುರೇಶ್ ಹನಗವಾಡಿ ಅವರು, 'ರಕ್ತದಲ್ಲಿ ಅಡಕವಾ ಗಿರುವ ಅಂಗವೈಕಲ್ಯ'ದ ಬಗ್ಗೆ ಜಾಗೃತಿ ಮೂಡಿಸಿದ್ದರಲ್ಲದೇ ವಿಕಲಚೇತನರ ಯೋಜನೆಗಳಿಗೆ ನೀತಿ ನಿಯಮಗಳನ್ನು ತರಲು ಸರ್ಕಾರದೊಂದಿಗೆ ಕೈ ಜೋಡಿಸಿದ್ದಾರೆ.

**ಡಾ. ಎಸ್.ಪಿ. ಬಾಲಸುಬ್ರಮಣ್ಯಂ ಪಾತ್ರ :**



ಕರ್ನಾಟಕ ಹಿಮೋಫಿಲಿಯಾ ಸೊಸೈಟಿಯ ಮಹಾಪೋಷಕರಾಗಿದ್ದ ಡಾ. ಎಸ್.ಪಿ. ಬಾಲಸುಬ್ರಮಣ್ಯಂ ಅವರು ಹಿಮೋಫಿಲಿಯಾ ಬಾಧಿತರ ನೋವನ್ನು ಬಹಳ ಹತ್ತಿರದಿಂದ ನೋಡಿದವರು, ರೋಗಿಗಳ ಕಣ್ಣೀರನ್ನು ಒರೆಸುವ ಸಲುವಾಗಿ ದಾವಣಗೆರೆ ನಗರದಲ್ಲಿ ವರ್ಷಕ್ಕೆ ಒಂದು ಸಂಗೀತ ಕಾರ್ಯಕ್ರಮವನ್ನು ತಮ್ಮ ತಂಡದೊಂದಿಗೆ ಆಗಮಿಸಿ ಆಯೋಜನೆ ಮಾಡುತ್ತಿದ್ದರು. ಇದರಲ್ಲಿ ಸಂಗ್ರಹವಾದ ಹಣವನ್ನು ರೋಗಿಗಳ ಕಲ್ಯಾಣಕ್ಕಾಗಿ ಬಳಸಲಾಗುತ್ತಿತ್ತು.

**ದೇಶದಲ್ಲಿಯೇ ಉತ್ತಮ ಚಿಕಿತ್ಸಾ ಕೇಂದ್ರ :** ಹಿಮೊಫಿಲಿಯಾ ರೋಗವು ಒಂದು ಅನುವಂಶಿಕ ಖಾಯಿಲೆಯಾಗಿದ್ದು, ವಿರಳ ಹಾಗೂ ದುಬಾರಿ ವೆಚ್ಚದ ರೋಗವಾಗಿದೆ. ನಗರದ ಹಿಮೋಫಿಲಿಯಾ ಸೊಸೈಟಿಯ ಚಿಕಿತ್ಸಾ ಕೇಂದ್ರವು ಕರ್ನಾಟಕವಲ್ಲದೆ ಹೊರ ರಾಜ್ಯಗಳ ರೋಗಿಗಳಿಗೆ ಒಂದೇ ಸೂರಿನಡಿ ಎಲ್ಲಾ ಚಿಕಿತ್ಸೆಯನ್ನು ನೀಡುತ್ತಾ ಬರುತ್ತಿದೆ. ರಕ್ತ ರೋಗಿಗಳಿಗೆ ಸುಸಜ್ಜಿತ ಪ್ರಯೋಗಲಯ, ಬ್ಲಡ್ ಬ್ಯಾಂಕ್ ಹಾಗೂ ಹಿಮೊಫಿಲಿಯಾ ಬಾಧಿತರು ಮತ್ತು ಪೋಷಕರಿಗೆ ಉಚಿತ ವಸತಿ, ಊಟವನ್ನು ಕಲ್ಪಿಸುತ್ತಿದೆ ಎಂದು ಸಂಸ್ಥೆಯ ಅಧ್ಯಕ್ಷರು ಹಾಗೂ ರಾಷ್ಟ್ರ ಪ್ರಶಸ್ತಿ ಪುರಸ್ಕೃತರಾದ ಡಾ. ಸುರೇಶ ಹನಗವಾಡಿ ತಿಳಿಸಿದರು.

ನಮ್ಮ ಸಂಸ್ಥೆ ಕೇವಲ ಹಿಮೊಫಿಲಿಯಾ ನ್ಯೂನ್ಯತೆಗೆ ಅಷ್ಟೇ ಅಲ್ಲದೇ, ಎಲ್ಲಾ ರಕ್ತ ರೋಗಿಗಳಿಗೆ ಚಿಕಿತ್ಸೆ ನೀಡುವ ಆಶ್ರಯ ತಾಣವನ್ನಾಗಿ ಮಾರ್ಪಡಿಸಲಾಗುತ್ತಿದೆ. ಇದಕ್ಕೆ ಸರ್ಕಾರ ಹಾಗೂ ಸಾರ್ವಜನಿಕರ ಸಹಕಾರ ಅತ್ಯಗತ್ಯ ಎಂದು ಡಾ|| ಸುರೇಶ ಹನಗವಾಡಿ ತಿಳಿಸಿದರು.

# ಪಂಚಮಸಾಲಿ : ಮೀಸಲಾತಿ ಹೋರಾಟದಲ್ಲಿ ದೃತಿಗೆಡದೆ ಪಾಲ್ಗೊಳ್ಳಿ

### ಪಂಚಮಸಾಲಿ ಮೀಸಲಾತಿಗಾಗಿ ಡಿ.10ರಂದು ಸುವರ್ಣ ಸೌಧ ಮುತ್ತಿಗೆ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್

ದಾವಣಗೆರೆ, ನ.4- ಪಂಚಮಸಾಲಿ ಸಮಾಜಕ್ಕೆ 2 ಎ ಮೀಸಲಾತಿ ನೀಡುವಂತೆ ಒತ್ತಾಯಿಸಿ ಕೂಡಲಸಂಗಮ ವೀರಶೈವ ಪಂಚಮಸಾಲಿ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಕಳೆದ ನಾಲ್ಕು ವರ್ಷಗಳಿಂದ ನಿರಂತರವಾಗಿ ಹೋರಾಟ ಮಾಡುತ್ತಾ ಬಂದಿದ್ದರೂ ಸರ್ಕಾರಗಳಿಂದ ನಮಗೆ ನ್ಯಾಯ ದೊರಕಿಲ್ಲ ಎಂದು ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ನಗರದ ತಮ್ಮ ನಿವಾಸದಲ್ಲಿ ಇಂದು ನಡೆದ ಇದೇ ದಿನಾಂಕ 10 ರಂದು ಬೆಳಗಾವಿ ಸುವರ್ಣಸೌಧ ಮುತ್ತಿಗೆ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಸ್ವಾತಂತ್ರ್ಯ ಹೋರಾಟಗಾರರು 150 ವರ್ಷಗಳ ಸುದೀರ್ಘ ಹೋರಾಟ ಮಾಡಿದ್ದರಿಂದಲೇ ನಮಗೆ ಸ್ವಾತಂತ್ರ್ಯ ಪಡೆಯಲು ಸಾಧ್ಯವಾಯಿತು. ಅದರಂತೆ ನಾವು ಕೂಡ ನಮ್ಮ ಸಮಾಜಕ್ಕೆ ಮೀಸಲಾತಿ ಕೊಡಿಸಲು ನಿರಂತರ ಹೋರಾಟ ಮಾಡಿದರೆ ಮಾತ್ರ ಸಾಧ್ಯ. ಸಮಾಜದ ಮುಖಂಡರು ದೃತಿಗೆಡದೇ ಹೋರಾಟದಲ್ಲಿ ಪಾಲ್ಗೊಳ್ಳಬೇಕೆಂದರು.



1994 ರಿಂದಲೇ ಸಮಾಜದ ಮುಖಂಡರು ಹೋರಾಟ ಆರಂಭಿಸಿದ್ದಾರೆ. ಆದರೆ ಇದುವರೆಗೂ ನ್ಯಾಯ ಸಿಗದಿರುವುದು ಬೇಸರದ ಸಂಗತಿಯಾಗಿದೆ. ಸಮಾಜದ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಪೀಠ ಬಿಟ್ಟು ಇಡೀ ರಾಜ್ಯ ಸುತ್ತುವ ಜೊತೆಗೆ ಸಮಾಜದಲ್ಲಿ ಜಾಗೃತಿ ಉಂಟು ಮಾಡುವ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು.

ಶ್ರೀಗಳ ಹೋರಾಟಕ್ಕೆ ಬೆಂಬಲವಾಗಿ ನಾವೆಲ್ಲರೂ ನಿಂತಾಗ ಮಾತ್ರ ಮತ್ತಷ್ಟು ಬಲ ಬರಲಿದೆ. ಡಿ. 10 ರಂದು ಬೆಳಗಾವಿಯಲ್ಲಿ ನಡೆಯುವ ಸುವರ್ಣಸೌಧಕ್ಕೆ ಟ್ರ್ಯಾಕ್ಟರ್ ಮುತ್ತಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ರಾಜ್ಯದಲ್ಲಿ ಅನೇಕ ಪೀಠಗಳಿದ್ದು, ನೀವು ಯಾವ ಪೀಠಕ್ಕಾದರೂ ನಡೆದುಕೊಳ್ಳಿ. ಸಮಾಜದ ಸಂಘಟನೆ ಅಂತಾ ಬಂದಾಗ ಒಟ್ಟಾಗಿ ಶ್ರೀಗಳ ಹೋರಾಟಕ್ಕೆ ಕೈಜೋಡಿಸಿದರೆ ಸಮಾಜ ಸಂಘಟನೆಗೆ ಶಕ್ತಿ ಬರುತ್ತದೆ. ಸರ್ಕಾರದ ಗಮನಸೆಳೆಯಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ 2ಎ ಮೀಸಲಾತಿ ಹೋರಾಟ ಕೇವಲ ಹೋರಾಟವಾಗಿ ಉಳಿಯುತ್ತದೆ. ಈಗಲಾದರೂ ಜಾಗೃತರಾಗಿ ಹೋರಾಟಗಳಲ್ಲಿ ಭಾಗವಹಿಸಿ ಎಂದು ಕರೆ ನೀಡಿದರು.

ಸ್ವಾಮೀಜಿ ನೇತೃತ್ವದಲ್ಲಿ ಈಗಾಗಲೇ ವಿವಿಧ ಹಂತದ ಹೋರಾಟಗಳನ್ನು ನಡೆಸುತ್ತಾ ಬರಲಾಗಿದೆ. ಹೆದ್ದಾರಿಯಲ್ಲಿ ಇಷ್ಟಲಿಂಗ ಪೂಜೆ ಮಾಡುವ ಮೂಲಕ ವಿನೂತನ ಪ್ರತಿಭಟನೆ ನಡೆಸಿ ಹೋರಾಟಕ್ಕೆ ಹೊಸ ತಿರುವು ನೀಡಿದ್ದಾರೆ.

ಸಮಾಜದ ಹಿತಕ್ಕಾಗಿ ಯಾವೊಬ್ಬ ಸ್ವಾಮೀಜಿ ಕೂಡ ಈ ರೀತಿ ದಿಟ್ಟ ನಿಲುವನ್ನು ತೆಗೆದುಕೊಂಡಿಲ್ಲ. ಇಂತಹ ಸ್ವಾಮೀಜಿ ನಮ್ಮ ಸಮಾಜಕ್ಕೆ ಸಿಕ್ಕಿರುವುದು ನಮ್ಮೆಲ್ಲರ ಪುಣ್ಯ ಎಂದು ಹೇಳಿದರು.

ಸಮಾಜದ ಯುವ ಮುಖಂಡ ಬಿ.ಜಿ. ಅಜಯ್ ಕುಮಾರ್ ಮಾತನಾಡಿ, ಸ್ವಾಮೀಜಿಯವರು ಏಳನೇ ಹಂತದ ಹೋರಾಟ ಮಾಡಿದರೂ ಸರ್ಕಾರಗಳು 2 ಎ ಮೀಸಲಾತಿ ನೀಡಲು ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಇದೀಗ ಡಿ. 10 ರಂದು ಬೆಳಗಾವಿ ಸುವರ್ಣಸೌಧ ಟ್ರ್ಯಾಕ್ಟರ್ ಮುತ್ತಿಗೆ ಕಾರ್ಯಕ್ರಮದಲ್ಲಿ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಮನವಿ ಮಾಡಿದರು.

ನಮ್ಮವರೇ ನಮ್ಮ ಹೋರಾಟವನ್ನು ಹತ್ತಿಕ್ಕುವಲ್ಲಿ ಮುಂದಾಗಿದ್ದಾರೆ. ಇಂತವರ ಬಗ್ಗೆ ಎಚ್ಚರ ವಹಿಸಬೇಕು. ಗ್ರಾಮೀಣ ಭಾಗದಿಂದ ಟ್ರ್ಯಾಕ್ಟರ್ ತರುವ ರೈತರು ತಮ್ಮ ಹೆಸರುಗಳನ್ನು ನೋಂದಾಯಿಸಬೇಕು. ಈಗಾಗಲೇ 200 ಕ್ಕೂ ಹೆಚ್ಚು ರೈತರು ಹೆಸರುಗಳನ್ನು ನೋಂದಾಯಿಸಿಕೊಂಡಿದ್ದಾರೆ ಎಂದರು.

ಟ್ರ್ಯಾಕ್ಟರ್ ಸರ್ವಿಸ್ ಮಾಡಿಸಿಕೊಳ್ಳುವ ಜೊತೆಗೆ ಚಾಲನಾ ಪರವಾನಿಗೆ, ಇನ್ಶೂರೆನ್ಸ್ ಪತ್ರಗಳನ್ನು ತರಬೇಕು. ಎಷ್ಟೇ ಟ್ರ್ಯಾಕ್ಟರ್ ಬಂದರೂ ಸಹ ನಾನೂ ಡಿಸೇಲ್ ಹಾಕಿಸುತ್ತೇನೆ ಎಂದು ತಿಳಿಸಿದರು.

ಬೆಳಗಾವಿ ಸುವರ್ಣಸೌಧ ಮುತ್ತಿಗೆ ಕಾರ್ಯಕ್ರಮಕ್ಕೆ ಭಾಗವಹಿಸುವ ಸಮಾಜ ಬಾಂಧವರಿಗಾಗಿ ಎರಡು ಬಸ್‌ಗಳ ವ್ಯವಸ್ಥೆ ಮಾಡಿಸುವುದಾಗಿ ಸಮಾಜದ ಮುಖಂಡ ಮಹಾಂತೇಶ್ ಒಣರೊಟ್ಟಿ ಹೇಳಿದರು.

ಪೂರ್ವಭಾವಿ ಸಭೆಯಲ್ಲಿ ಸಮಾಜದ ಮುಖಂಡರುಗಳಾದ ಮೋತಿ ಟಿ. ಶಂಕರಪ್ಪ, ವಕೀಲ ಯೋಗೇಶ್, ಮಿಟ್ಲಕಟ್ಟೆ ಚಂದ್ರಣ್ಣ, ಚಂದ್ರಶೇಖರ್ ಸೇರಿದಂತೆ ಅನೇಕ ಮುಖಂಡರು ಭಾಗವಹಿಸಿದ್ದರು.

## 9ಕ್ಕೆ ಗುರು ಕರಿಬಸವೇಶ್ವರ ಕಾರ್ತಿಕ



ದಾವಣಗೆರೆ, ಡಿ.4- ನಗರದ ಲೇಬರ್ ಕಾಲೋನಿ 6ನೇ ಕ್ರಾಸ್‌ನಲ್ಲಿನ ಶ್ರೀ ಗುರು ಕರಿಬಸವೇಶ್ವರ ದೇವಸ್ಥಾನದಲ್ಲಿ ಇದೇ ದಿನಾಂಕ 9 ರಂದು ಸೋಮವಾರ ಸಂಜೆ 6.30ಕ್ಕೆ ಸ್ವಾಮಿಯ ಕಾರ್ತಿಕ ದೀಪೋತ್ಸವ ಏರ್ಪಡಿಸಲಾಗಿರುತ್ತದೆ.

## ಹರಿಹರ : ದಾವಿವಿಯ ಸಿಂಡಿಕೇಟ್ ಸದಸ್ಯ ಪ್ರಶಾಂತ್‌ಗೆ ಸನ್ಮಾನ



ಹರಿಹರ, ಡಿ.4- ನಗರದ ಶ್ರೀಶೈಲ ಮಹಾಪೀಠದ ಶ್ರೀ ಜಗದ್ಗುರು ಪಂಚಾಚಾರ್ಯ ವಿಶ್ವಧರ್ಮ ವಿದ್ಯಾಪೀಠದ ಕಾರ್ಯದರ್ಶಿ ಆರ್.ಟಿ. ಪ್ರಶಾಂತ್ ದುಗ್ಗತ್ತಿಮಠ ಅವರು ದಾವಣಗೆರೆ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ನೇಮಕಗೊಂಡಿದ್ದು, ಅವರನ್ನು ಹರಿಹರ ತಾಲ್ಲೂಕಿನ ನೌಕರರ ಸಂಘದ ವತಿಯಿಂದ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಹರಿಹರ ನೌಕರರ ಸಂಘದ ಅಧ್ಯಕ್ಷ ವಿಜಯ ಮಹಾಂತೇಶ್, ಬಿಇಓ ದುರ್ಗಪ್ಪ ಮಾತನಾಡಿದರು. ಪ್ರಾಸ್ತಾವಿಕವಾಗಿ ಆರ್.ಆರ್. ಮಠ ಮಾತನಾಡಿದರು. ಶಿಕ್ಷಕರಾದ ಆರ್.ಬಿ.ಮಲ್ಲಿಕಾರ್ಜುನ್ ನಿರೂಪಿಸಿದರು. ಕೆ.ಜಿ.ನಂಜುಂಡಪ್ಪ ವಂದಿಸಿದರು.

ಸಂಘದ ಪದಾಧಿಕಾರಿಗಳಾದ ರುದ್ರಪ್ಪ ಕಾಶೀಪುರ, ಬಿ.ಎನ್.ವೀರಪ್ಪ, ಕೆ.ಎನ್.ಬಸವರಾಜಪ್ಪ, ಚನ್ನವೀರಯ್ಯ ಹಿರೇಮಠ, ಹೆಚ್.ಕೆ.ಸತೀಶ್ ಕುಮಾರ್, ಮುಸ್ತಾಕ್ ಅಹಮದ್ ರಾಜ್ಯ ಪರಿಷತ್ ಸದಸ್ಯ ಉಮ್ಮಣ್ಣ, ನಿಕಟಪೂರ್ವ ಅಧ್ಯಕ್ಷರಾದ ರೇವಣಸಿದ್ದಪ್ಪ ಅಂಗಡಿ, ಭೂಮೇಶ್, ಶರಣ ಕುಮಾರ ಹೆಗಡೆ, ಗದಿಗೆಪ್ಪ ಹಳೆಮನೆ, ಮಂಚಪ್ಪ ಬಿದರಿ, ಕೆಎನ್‌ಬಿ, ನೌಕರ ಸಂಘದ ನಿರ್ದೇಶಕರಾದ ಅಶ್ಫಾಕ್ ಅಹಮದ್, ಗಿರೀಶ್ ಇತರರು ಭಾಗವಹಿಸಿದ್ದರು.

## ಹರಿಹರ ಮಲ್ಟಿಪರ್ಪಸ್, ಮೆಕ್ಯಾನಿಕ್ ಸಂಘದ ಅಧ್ಯಕ್ಷರಾಗಿ ಶೇಖ್ ಮೆಹಬೂಬ



ಹರಿಹರ,ಡಿ.4- ತಾಲ್ಲೂಕಿನ ಮಲ್ಟಿಪರ್ಪಸ್ ಹಾಗೂ ಮೆಕ್ಯಾನಿಕ್ ಸಂಘದ ಅಧ್ಯಕ್ಷರಾಗಿ ಶೇಖ್ ಕಮ್ಯೂನಿಕೇಶನ್ಸ್ ಮಾಲೀಕ ಶೇಖ್ ಮೆಹಬೂಬ್ ಕಣವಿ ಆಯ್ಕೆಯಾಗಿದ್ದಾರೆ.

ನಗರದ ಮುನ್ಸಿಪಲ್ ಕಾಂಪ್ಲೆಕ್ಸ್‌ನಲ್ಲಿ ಚುನಾವಣೆ ನಡೆಯಿತು. ಸತತ ನಾಲ್ಕು ವರ್ಷಗಳ ಕಾಲ ಅಧ್ಯಕ್ಷರಾಗಿದ್ದ ಸಂತು ಕಮ್ಯೂನಿಕೇಶನ್ಸ್ ಮಾಲೀಕ ಸಂತೋಷ ಗುಡಿಮನಿ ಅವರು ಹೊಸಬರಿಗೆ ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಕಾರಣ ಚುನಾವಣೆ ನಡೆಯಿತು. ಒಟ್ಟು 101 ಜನ ಸಂಘದ ಸದಸ್ಯರಿದ್ದು, 94 ಜನ ಸದಸ್ಯರು ಮತ ಚಲಾಯಿಸಿದರು.

ಸಂತೋಷ ಗುಡಿಮನಿ, ಸಯ್ಯದ್, ಸಾಜಿದ್, ಜಾವೀದ್, ಸಂಜೀವಗೌಡ, ಶಿವಕುಮಾರ್, ಅವಿನಾಶ್, ಅಬ್ದುಲ್ ವಾಹಬ್, ರಫೀಕ್, ಪ್ರಶಾಂತ್, ಆಬಿದ್, ಸಾದಿಕ್, ಅಕ್ಷಯ್, ಅರ್ಷದ್ ಸೇರಿದಂತೆ ಇತರರು ಚುನಾವಣೆ ಕಾರ್ಯ ನಡೆಸಿದರು.

## ಫೋಟೋಗ್ರಾಫಿ - ವಿಡಿಯೋಗ್ರಾಫಿ ತರಬೇತಿಗೆ ಅರ್ಜಿ

ದಾವಣಗೆರೆ, ಡಿ. 4 -ಡ್ರೋನ್ ಆಧಾರಿತ ಫೋಟೋಗ್ರಾಫಿ ಮತ್ತು ವಿಡಿಯೋಗ್ರಾಫಿ ಮೂಲಕ ಸಾಮಾಜಿಕ ಜಾಲತಾಣಗಳಲ್ಲಿ ಉದ್ಯೋಗ ಪಡೆಯಲು ಇಚ್ಚಿಸುವ ಪರಿಶಿಷ್ಟ ಪಂಗಡದ ಯುವಕ, ಯುವತಿಯರಿಗೆ ತರಬೇತಿ ನೀಡಲು ಅರ್ಜಿ ಅಹ್ವಾನಿಸಲಾಗಿದೆ. ತರಬೇತಿ ಪಡೆಯಲು ಇಚ್ಚಿಸುವರು ಅರ್ಜಿ ನಮೂನೆಯನ್ನು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ದಾವಣಗೆರೆ, ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ದಾವಣಗೆರೆ, ಜಗಳೂರು, ಚನ್ನಗಿರಿ ತಾಲ್ಲೂಕು ಹಾಗೂ ಸಹಾಯಕ ನಿರ್ದೇಶಕರು, (ಗ್ರೇಡ್-2), ಸಮಾಜ ಕಲ್ಯಾಣ ಇಲಾಖೆ, ಹರಿಹರ ಮತ್ತು ಹೊನ್ನಾಳಿ ಕಚೇರಿಯಲ್ಲಿ ಪಡೆದು, ಇದೇ ದಿನಾಂಕ 11 ರೊಳಗಾಗಿ ಸಲ್ಲಿಸಬೇಕು ಎಂದು ಜಿಲ್ಲಾ ಅಧಿಕಾರಿ ನವೀನ್ ಸಿ ಮಠದ್ ತಿಳಿಸಿದ್ದಾರೆ.


## ಸಾರ್ವಜನಿಕರ ಮಾಹಿತಿಗಾಗಿ

ನನ್ನ ಕಕ್ಷಿದಾರರರಾದ ಶ್ರೀ ಎಂ.ಎಸ್.ಸುರೇಶ್ ಬಿನ್ ಶಾಂತಪ್ಪ ಮೃತರಾಗಿದ್ದು, ಹಾಲಿ ಇವರ ಹೆಂಡತಿ ಮತ್ತು ಮಗನಾದ ಶ್ರೀಮತಿ ಸುಜಾತ ಟಿ.ಎಸ್. ಹಾಗು ಶ್ರೀ ಸುಮುಖ್ ಎಂ.ಎಸ್. ವಾಸ: # 4141, 6ನೇ ಕ್ರಾಸ್, 13ನೇ ಮೇನ್, ಎಂಸಿಸಿ ಬಿ ಬ್ಲಾಕ್, ಕುವೆಂಪು ನಗರ, ದಾವಣಗೆರೆ ವಾಸಿಗಳಾದ ಇವರ ಪರವಾಗಿ ನೀಡಿದ ಸಾರ್ವಜನಿಕ ನೋಟೀಸ್ ಏನೆಂದರೆ,

ದಾವಣಗೆರೆ ಸಿಟಿ, ಶಿವಕುಮಾರಸ್ವಾಮಿ ಬಡಾವಣೆ, 2ನೇ ಹಂತ, 2ನೇ ಮೇನ್, 2ನೇ ಕ್ರಾಸ್, ಡೋರ್ ನಂ.774/34 ರಲ್ಲಿ ವಾಸವಾಗಿರುವ (1) ಶ್ರೀ ಜೆ.ಎಸ್.ಕೃಷ್ಣಮೂರ್ತಿ ಬಿನ್ ಸಿಂಗಾರಾಮ್ (2) ಶ್ರೀಮತಿ ಕೋಮಲ ಕೆ.ಎಸ್. ಕೋಂ ಜೆ.ಎಸ್. ಕೃಷ್ಣಮೂರ್ತಿ ಇವರಿಗೆ ಗುಲಬರ್ಗಾ ವಿದ್ಯುತ್ ಗುತ್ತಿಗೆ ಕೆಲಸಕ್ಕಾಗಿ ನನ್ನ ಕಕ್ಷಿದಾರ ಎಂ.ಎಸ್.ಸುರೇಶ್ ಅವರಿಗೆ ಸೇರಿದ ಮನೆಯನ್ನು ಒಳಗೊಂಡಂತೆ ಶ್ರೀ ಜೆ.ಎಸ್. ಕೃಷ್ಣಮೂರ್ತಿ ಬಿನ್ ಸಿಂಗಾರಾಮ್ (2) ಶ್ರೀಮತಿ ಕೋಮಲ ಕೆ.ಎಸ್. ಕೋಂ ಜೆ.ಎಸ್.ಕೃಷ್ಣಮೂರ್ತಿ ಇವರಿಗೆ ಸೇರಿದ ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳನ್ನು ಆಧಾರ ಮಾಡಿ ಕೆನರಾ ಬ್ಯಾಂಕ್‌ನಲ್ಲಿ ಬ್ಯಾಂಕ್ ಗ್ಯಾರಂಟಿ ಸಾಲವನ್ನು ಕೊಡಿಸಿದ್ದರು ಮತ್ತು ಗುತ್ತಿಗೆ ವ್ಯವಹಾರಕ್ಕೆ ನನ್ನ ಕಕ್ಷಿದಾರರಿಂದ ಹಣದ ಸಹಾಯ ಪಡೆದಿರುತ್ತಾರೆ. ಆದರೆ ಸದರಿ (1) ಶ್ರೀ ಜೆ.ಎಸ್. ಕೃಷ್ಣಮೂರ್ತಿ ಬಿನ್ ಸಿಂಗಾರಾಮ್ (2) ಶ್ರೀಮತಿ ಕೋಮಲ ಕೆ.ಎಸ್. ಕೋಂ ಜೆ.ಎಸ್.ಕೃಷ್ಣಮೂರ್ತಿ ಇವರು ಸಾಲವನ್ನು ತೀರುವಳಿ ಮಾಡದೇ ನನ್ನ ಕಕ್ಷಿದಾರರಿಗೆ ಸಾಲದ ಮೊತ್ತವನ್ನು ಹಿಂದಿರುಗಿಸಿರುವುದಿಲ್ಲ.

ನನ್ನ ಕಕ್ಷಿದಾರರು ಮಾನ್ಯ ಸಿವಿಲ್ ಜಡ್ಜ್ (ಸೀನಿಯರ್ ಡಿವಿಜನ್), ದಾವಣಗೆರೆ ಇಲ್ಲಿ COM OS 70/23 ರ ಮೂಲಕ ದಾವೆಯನ್ನು ಹೂಡಿರುತ್ತಾರೆ. ಈ ಕೆಳಕಂಡ ಷೆಡ್ಯೂಲ್ ಸ್ವತ್ತಿನ ಬಗ್ಗೆ ಮೇಲ್ಕಂಡ ಕೇಸಿನ ಪ್ರತಿವಾದಿಯವರಾದ (1) ಶ್ರೀ ಜೆ.ಎಸ್.ಕೃಷ್ಣಮೂರ್ತಿ ಬಿನ್ ಸಿಂಗಾರಾಮ್ (2) ಶ್ರೀಮತಿ ಕೋಮಲ. ಕೆ.ಎಸ್. ಕೋಂ ಜೆ.ಎಸ್.ಕೃಷ್ಣಮೂರ್ತಿ ಕೆಳಕಂಡ ಆಸ್ತಿಯನ್ನು ಮಾರಾಟ ಮಾಡುವ ತರಾತುರಿಯಲ್ಲಿರುತ್ತಾರೆ ಎಂದು ತಿಳಿದುಬಂದಿರುತ್ತದೆ. ಇವರ ಜೊತೆ ಯಾರಾದರೂ ಭೋಗ್ಯ / ಬಾಡಿಗೆ / ಖರೀದಿ ಇನ್ನಿತರೆ ರೀತಿಯಲ್ಲಿ ವ್ಯವಹರಿಸಿದಲ್ಲಿ, ಪ್ರತಿವಾದಿಯರ ಜೊತೆ ವ್ಯವಹರಿಸಿದವರೇ ನೇರ ಹೊಣೆಗಾರರಾಗುತ್ತಾರೆಂದು ಈ ಮೂಲಕ ವಾದಿಯರ ಪರ ಸಾರ್ವಜನಿಕ ಪ್ರಕಟಣೆಯನ್ನು ನೀಡಲಾಗಿದೆ.

**ಷೆಡ್ಯೂಲ್** : ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಆನಗೋಡು ಹೋಬಳಿ, ಪಾಮೇನಹಳ್ಳಿ ಗ್ರಾಮದ ರಿ.ಸ.ನಂ. 34/16 ವಿಸ್ತೀರ್ಣ 2-00 (ಎರಡು)' ಎಕರೆ ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ಕೈಗಾರಿಕೆ ಉದ್ದೇಶಕ್ಕಾಗಿ ಭೂ ಪರಿವರ್ತಿತ ಜಮೀನಿಗೆ **ಚಕ್ಕುಬಂದಿ: ಪೂರ್ವಕ್ಕೆ** : ಲಾ.ಹಿ. ನಂ.10ರ ಜಮೀನು, **ಉತ್ತರಕ್ಕೆ** : ಬ್ಲಾಕ್ ನಂ.1 ರ ಜಮೀನು, **ಪಶ್ಚಿಮಕ್ಕೆ** : ಲಾ.ಹಿ.ನಂ.1ರ ಜಮೀನು, **ದಕ್ಷಿಣಕ್ಕೆ**: ಲಾ.ಹಿ.ನಂ. 35ರ ಜಮೀನು. ಈ ಮಧ್ಯದ ಸ್ವತ್ತು ಒಂದು.

ದಿನಾಂಕ : 04.12.2024
ಸ್ಥಳ : ದಾವಣಗೆರೆ

**(ಕೆ.ಬಿ. ಶೈಲಶ್ರೀ)**
ವಕೀಲರು, ದಾವಣಗೆರೆ, **ಮೊ. : 94486 58502**



## ಘನ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ದಾವಣಗೆರೆ

ಅಸಲು ದಾವಾ ನಂ. 311/2014

ವಾದಿಗಳು : **ರೇವಣಸಿದ್ದಪ್ಪ ಮತ್ತು ಇತರರು** ವಿರುದ್ಧ

ಪ್ರತಿವಾದಿಗಳು : **1. ಶ್ರೀ ನಾರಾಯಣ ನಾಯ್ಕ** - ಪೌತಿ

ವಾರಸುದಾರರು ಉದ್ದೇಶಿತ ಪ್ರತಿವಾದಿ **8. ನಾಗರಾಜ ಬಿನ್ ಓಂಕಾರನಾಯ್ಕ**, ವಯಸ್ಸು 26, lರಗಾರ ಕೆಲಸ, ತೋಳಹುಣಸೆ ಗ್ರಾಮ, ದಾವಣಗೆರೆ ತಾಲ್ಲೂಕು.

**ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20ರ ಅಡಿಯಲ್ಲಿ ನೋಟೀಸ್**

ವಾದಿಗಳು ಪ್ರತಿವಾದಿಗಳ ವಿರುದ್ಧ ಅಸಲು ದಾವೆ ನಂ. 311/2014ರ ದಾವೆಯನ್ನು ಸಲ್ಲಿಸಿದ್ದು, ಪ್ರತಿವಾದಿಗಳು, ಉದ್ದೇಶಿತ 8ನೇ ಪ್ರತಿವಾದಿಗಳ ವಿರುದ್ಧ ದಾವ ಬಿ ಷೆಡ್ಯೂಲ್ ಸೊತ್ತು ವಾದಿಯರ ಮಾಲೀಕತ್ವದ ಮತ್ತು ಶಾಂತಿಯುತ ಸ್ವಾಧೀನಾನುಭವದಲ್ಲಿರುವ ಪಿತ್ರಾರ್ಜಿತ ಸೊತ್ತೆಂದು ಘೋಷಿಸಲು ಮತ್ತು ವಾದಿಯು ದಾವಾ ಬಿ ಷೆಡ್ಯೂಲ್ ಸೊತ್ತಿನ ಮಾಲೀಕರೆಂದು ಘೋಷಿಸಲು ಮತ್ತು ಇತರೆ ಪರಿಹಾರಗಳನ್ನು ಕೋರಿ ದಾವೆಯನ್ನು ಘನ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ದಾವಣಗೆರೆಯಲ್ಲಿ ಸಲ್ಲಿಸಿರುತ್ತಾರೆ.

ಉದ್ದೇಶಿತ ಪ್ರತಿವಾದಿ 8ನೇಯವರಾದ ನಿಮಗೆ ದಾವಾ ಆಸ್ತಿಗೆ ಸಂಬಂಧ ಪಟ್ಟಂತೆ ಈ ಮೇಲೆ ಹೇಳಿರುವಂತೆ ಪರಿಹಾರವನ್ನು ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಈಗಾಗಲೇ ನಿಮಗೆ ನ್ಯಾಯಾಲಯದ ಮೂಲಕ, ಅಂಚೆಯ ಮೂಲಕ, ಹ್ಯಾಂಡ್ ನೋಟೀಸ್‌ನೊಂದಿಗೆ ಪ್ರತಿವಾದಿಗಳ ಮತ್ತು ಪ್ರೊಸೆಸ್ ಸರ್ವರ್‌ಗಳ ಮೂಲಕ ನೋಟೀಸ್ ಕಳುಹಿಸಿದ್ದರು ಜಾರಿ ಆಗಿರುವುದಿಲ್ಲ. ಆದ್ದರಿಂದ ಸದರಿ ಮೇಲ್ಕಂಡ ದಾವೆಯು ದಿನಾಂಕ 07.01.2025ರಂದು ನಿಮ್ಮಗಳ ಹಾಜರಾತಿಗಾಗಿ ಇರುತ್ತದೆ. ಆದ್ದರಿಂದ ಸದರಿ ದಿನಾಂಕದಂದು ನ್ಯಾಯಾಲಯಕ್ಕೆ ಬೆಳಿಗ್ಗೆ 11 ಗಂಟೆಗೆ ನೀವಾಗಲಿ, ನಿಮ್ಮ ಪರ ವಕೀಲರ ಮುಖಾಂತರವಾಗಲಿ ಹಾಜರಾಗತಕ್ಕದ್ದು. ಹಾಜರಾಗಲು ತಪ್ಪಿದಲ್ಲಿ ನಿಮ್ಮಗಳ ಗೈರು ಹಾಜರಿಯಲ್ಲಿ ನಿಮ್ಮಗಳ ವಿರುದ್ಧ ಏಕಪಕ್ಷೀಯವಾಗಿ ದಾವೆಯನ್ನು ತೀರ್ಮಾನಿಸಲಾಗುವುದು.

ಈ ದಿವಸ 04.12.2024ನೇ ತಾರೀಖು ಡಿಸೆಂಬರ್ ಮಾಹೆ 2024ನೇ ತಾರೀಖಿನಿಂದ ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ನೀಡಿರುತ್ತಾರೆ.

ಸಹಿ/- **ಕೆ. ಸೈಯದ್ ಖಾದರ್**, ವಕೀಲರು,
ಕೆ.ಎಸ್.ಕೆ. ಲಾ ಅಸೋಸಿಯೇಟ್ಸ್, ದಾವಣಗೆರೆ.

ಸಹಿ/- **ಶಿರಸ್ತೇದಾರರು**
1ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕಿರಿಯ ವಿಭಾಗ.

# ಪಾಲಿಕೆಯ ರಾಜ್ಯೋತ್ಸವದಲ್ಲಿ 'ಚಿರಂತನ' ನೃತ್ಯ ಪ್ರದರ್ಶನ



ದಾವಣಗೆರೆ, ಡಿ.4 ಮಹಾನಗರ ಪಾಲಿಕೆ ವತಿಯಿಂದ ಕಳೆದ ವಾರ ನಡೆದ 69ನೇ ಕನ್ನಡ ರಾಜ್ಯೋತ್ಸವದ ಸಮಾರಂಭದಲ್ಲಿ ಚಿರಂತನ ತಂಡ ಕರ್ನಾಟಕ ನೃತ್ಯ ವೈವಿಧ್ಯ ಕಾರ್ಯಕ್ರಮ ನಡೆಸಿಕೊಟ್ಟಿತು. ಕರ್ನಾಟಕದ ವಿವಿಧ ನೃತ್ಯ ಪ್ರಕಾರಗಳಲ್ಲಿ ಕರ್ನಾಟಕದ ವೈಭವ ಬಿಂಬಿಸುವ ಹಾಡುಗಳಿಗೆ ನೃತ್ಯ ಪ್ರಸ್ತುತಪಡಿಸಲಾಯಿತು. ಚಿರಂತನದ ಗುರುಗಳಾದ ವಿದುಷಿ ರಕ್ಷಾ ರಾಜಶೇಖರ್ ಹಾಗು ಶ್ರೀಮತಿ ದೀಪಾ ಅವರ ನೃತ್ಯ ಸಂಯೋಜನೆಯಲ್ಲಿ ಮೂಡಿಬಂದ ಈ ಸುಂದರ ನೃತ್ಯಗಳಿಗೆ ಪ್ರೇಕ್ಷಕರ ಮೆಚ್ಚುಗೆ ದೊರಕಿತು.

# ಭಾರತದಲ್ಲಿ ಭೂತಾನ್ ದೊರೆ ಪ್ರವಾಸ



ನವದೆಹಲಿ, ಡಿ.4- ಭತಾನ್ ದೊರೆ ಜಿಗ್ಮ್ ಖೇಸರ್ ನಮ್ಗೇಲ್ ವಾಂಗ್‌ಚುಕ್ ಅವರು ನಾಳೆ ದಿನಾಂಕ 5ರಿಂದ ಎರಡು ದಿನಗಳ ಭಾರತ ಪ್ರವಾಸ ಕೈಗೊಳ್ಳಲಿದ್ದಾರೆ. ಈಗಾಗಲೇ ದೃಢವಾಗಿರುವ ಉಭಯ ರಾಷ್ಟ್ರಗಳ ಸಂಬಂಧ ಮತ್ತಷ್ಟು ವೃದ್ಧಿ ಉದ್ದೇಶದಿಂದ ಅವರು ಭಾರತಕ್ಕೆ ಆಗಮಿಸುತ್ತಿದ್ದಾರೆ. ದೊರೆ ತಮ್ಮ ಪತ್ನಿ ರಾಣಿ ಜೆಟ್ಸುನ್ ಪೆಮಾ ವಾಂಗ್‌ಚುಕ್ ಹಾಗೂ ಭೂತಾನ್ ಸರ್ಕಾರದ ಹಿರಿಯ ಅಧಿಕಾರಿಗಳೊಂದಿಗೆ ಆಗಮಿಸುವರು.

# ಯತ್ನಾಳ್ ಹೊರಗಿನವರಲ್ಲ



ಶಿವಮೊಗ್ಗ, ಡಿ.4 - ಬಸನಗೌಡ ಪಾಟೀಲ್ ಯತ್ನಾಳ್ ಅವರು 'ಹೊರಗಿನವರಲ್ಲ' ಎಂದು ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಹೇಳಿದ್ದಾರೆ. ಶಿವಮೊಗ್ಗದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯ ಎಲ್ಲಾ ಆಂತರಿಕ ಸಮಸ್ಯೆಗಳನ್ನು ಚರ್ಚೆಯ ಮೂಲಕ ಇತ್ಯರ್ಥಪಡಿಸುವ ವಿಶ್ವಾಸ ವ್ಯಕ್ತಪಡಿಸಿದರು. ಯತ್ನಾಳ್ ಅವರು ಹೊರಗಿನವರಲ್ಲ, ಕೆಲವು ಕಾರಣಗಳಿಂದ ಅವರು ಆಕ್ರೋಶಗೊಂಡಿರಬಹುದು, ಮಾತನಾ ಡೋಣ. ಎಲ್ಲರನ್ನು ಒಟ್ಟಿಗೆ ಕರೆದುಕೊಂಡು ಹೋಗಬೇಕು ಎಂಬುದು ನನ್ನ ನಿರೀಕ್ಷೆ. ಇದು ವಿಜಯೇಂದ್ರ ಅವರ ನಿರೀಕ್ಷೆಯೂ ಹೌದು ಎಂದು ಹೇಳಿದರು.

# ಮಲೇಬೆನ್ನೂರು ಪುರಸಭೆ ಅಧ್ಯಕ್ಷ ಸ್ಥಾನಕ್ಕೆ 12 ರಂದು ಚುನಾವಣೆ

ಮಲೇಬೆನ್ನೂರು, ಡಿ.4- ಇಲ್ಲಿನ ಪುರಸಭೆಯ ಅಧ್ಯಕ್ಷ ಸ್ಥಾನಕ್ಕೆ ಇದೇ ದಿನಾಂಕ 12 ರಂದು ಚುನಾವಣೆ ನಡೆಸಲಾಗುವುದು ಎಂದು ತಹಶೀಲ್ದಾರ್ ಗುರುಬಸವರಾಜ್ ಅವರು ತಿಳಿಸಿದ್ದಾರೆ. ಮಲೇಬೆನ್ನೂರು ಪುರಸಭೆಯ 10ನೇ ಅವಧಿಗೆ ಅಧ್ಯಕ್ಷ ಸ್ಥಾನ ಪರಿಶಿಷ್ಠ ಪಂಗಡಕ್ಕೆ ಮೀಸಲಾಗಿದ್ದು, ಜೆಡಿಎಸ್ ಸದಸ್ಯ ಟಿ. ಹನುಮಂತಪ್ಪ ಅವರು ಅವಿರೋಧವಾಗಿ ಆಯ್ಕೆಯಾಗುವುದು ಬಹುತೇಕ ಖಚಿತ ಎನ್ನಲಾಗಿದೆ. ಇಲ್ಲಿ ಕಾಂಗ್ರೆಸ್ ಬಹುಮತ ಹೊಂದಿದ್ದರೂ ಎಸ್ಟಿ ಮೀಸಲಾತಿಯ ಸದಸ್ಯರಿಲ್ಲದ ಕಾರಣ 3 ಜನ ಸದಸ್ಯರನ್ನು ಹೊಂದಿದ ಜೆಡಿಎಸ್‌ಗೆ ಬಹಳ ಸುಲಭವಾಗಿ ಅಧಿಕಾರ ಸಿಗಲಿದೆ ಎಂದು ಹೇಳಲಾಗುತ್ತಿದೆ.


## ಹೃದಯಪೂರ್ವಕ ಅಭಿನಂದನೆಗಳು



ದಾವಣಗೆರೆ ನಗರದ ಪ್ರತಿಷ್ಠಿತ ಬಾಪೂಜಿ ವಿದ್ಯಾಸಂಸ್ಥೆಗಳಲ್ಲೊಂದಾದ ಬಾಪೂಜಿ (BIHE) BCA, PSSSHE (BIET) BCA ಮತ್ತು ಇಂಟರ್ಫೇಸ್ (ICCA) BCA ಕಾಲೇಜುಗಳಲ್ಲಿ ಇಂಗ್ಲೀಷ್ ಸಹಾಯಕ ಪ್ರಾಧ್ಯಾಪಕರಾದ ವಿಜಯ್ ಎಂ.ಎಸ್. ಅವರಿಗೆ ಅಮೇರಿಕಾದ ಪ್ರತಿಷ್ಠಿತ ಸ್ಟ್ಯಾನ್‌ಫೋರ್ಡ್ ಅಂತರರಾಷ್ಟ್ರೀಯ ವಿಶ್ವವಿದ್ಯಾಲಯ ದಿನಾಂಕ : 30.11.2024 ರಂದು ದೆಹಲಿಯಲ್ಲಿ ಪದ್ಮಶ್ರೀ ಪುರಸ್ಕೃತ ಡಾ. ಜಿತೇಂದರ್ ಸಿಂಗ್ ಶುಂತ್ಯ ಅವರಿಂದ "ಡಾಕ್ಟರೇಟ್ ಇನ್ ಎಜುಕೇಷನ್" ಎಂಬ ಗೌರವಾನ್ವಿತ ಡಾಕ್ಟರೇಟ್ ಪದವಿಯನ್ನು ಪ್ರದಾನ ಮಾಡಿ ಗೌರವಿಸಿದರು.

ಡಾ॥ ವಿಜಯ್ ಎಂ.ಎಸ್. ಇವರಿಗೆ ಅಭಿನಂದಿಸುವವರು....

ತಂದೆ : ಶ್ರೀ ಎಂ.ಜಿ. ಸಿದ್ದನಗೌಡ್ರು, ಉಚ್ಚಂಗಿದುರ್ಗ.
ತಾಯಿ : ಶ್ರೀಮತಿ ಉಮಾದೇವಿ ಸಿದ್ಧನಗೌಡ್ರು
ಶ್ರೀಮತಿ ಅಶ್ವಿನಿ ಶಿವಕುಮಾರ್, ಶ್ರೀ ಶಿವಕುಮಾರ್ ಎಸ್. ಶೀಲವಂತ್
ಶ್ರೀಮತಿ ರಾಜೇಶ್ವರಿ ವಿಜಯ ಎಂ.ಎಸ್., ಕುಮಾರಿ ಅಪೇಕ್ಷಾ
ಕುಮಾರ್ ಅನ್ಮೋಲ್ ರತನ್ ಹಾಗೂ ಬಂಧು-ಮಿತ್ರರು

## ಭಾವಪೂರ್ಣ ಶ್ರದ್ಧಾಂಜಲಿ



ಇತ್ತೀಚಿಗೆ ನಿಧನರಾದ, ಚೌಕಿಪೇಟೆಯ ಶ್ರೀ ಸಿದ್ಧಲಿಂಗೇಶ್ವರ ಎಂಟರ್‌ಪ್ರೈಸಸ್ ಮಾಲೀಕರಾದ ಶ್ರೀ ಕೊಳಹಾಳು ಮಠದ ಪ್ರಭುಸ್ವಾಮಿಯವರ ಧರ್ಮಪತ್ನಿ

**ಶ್ರೀಮತಿ ನಂದಾ ಪ್ರಭುಸ್ವಾಮಿ** ಅವರಿಗೆ

ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತಾ, ದೇವರು ಮೃತರ ಆತ್ಮಕ್ಕೆ ಶಾಂತಿ ನೀಡಲಿ ಹಾಗೂ ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ನೀಡಲೆಂದು ಪ್ರಾರ್ಥಿಸುತ್ತೇವೆ.

✦ ಯಶವಂತರಾವ್ ಜಾಧವ್ ✦ ಎಂ ಪರಪ್ಪ
✦ ಎಂ. ದೊಡ್ಡಪ್ಪ ✦ ಗೌತಮ್ ಕುಮಾರ್
✦ ಹುಕುಂ ಚಂದ್ ✦ ವಿಜಯಕುಮಾರ್ (LIC)
✦ ಎಂ.ಜಿ. ಸುಭಾಶ್ಚಂದ್ರ ✦ ಜಿ.ನಾಗರಾಜ್ (BSNL)



## ಹೃತ್ಪೂರ್ವಕ ಅಭಿನಂದನೆಗಳು



ಪ್ರತಿಷ್ಠಿತ ದಾವಣಗೆರೆ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ನೇಮಕವಾಗಿರುವ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ದಾವಣಗೆರೆ ಜಿಲ್ಲಾ ಉಪಾಧ್ಯಕ್ಷರು, ಶ್ರೀಶೈಲ ಮಹಾಪೀಠದ ಶ್ರೀ ಜಗದ್ಗುರು ಪಂಚಾಚಾರ್ಯ ವಿಶ್ವಧರ್ಮ ವಿದ್ಯಾಪೀಠ, ಇದರ ಕಾರ್ಯದರ್ಶಿಗಳು ನಮ್ಮ ಪರಿವಾರದ ಹೆಮ್ಮೆಯ

**ಶ್ರೀ ಆರ್.ಟಿ. ಪ್ರಶಾಂತ್ ದುಗ್ಗತ್ತಿಮಠ್‌ರವರಿಗೆ**

ಅಭಿನಂದಿಸುತ್ತಾ, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸ್ಥಾನ-ಮಾನಗಳು ದೊರಕಲಿ ಎಂದು ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರಲ್ಲಿ ಭಕ್ತಿಪೂರ್ವಕವಾಗಿ ಕೋರುತ್ತಾ

ಶುಭ ಕೋರುವವರು :

- ವಿಜಯಕುಮಾರ್ ಅಣಬೂರ್ ಮಠ, ಹದಡಿ
- ಜಿ.ಎಂ.ವಿ. ವೀರಯ್ಯ, ಗುಳದಹಳ್ಳಿ
- ಎನ್.ಎಂ. ತಿಪ್ಪೇಸ್ವಾಮಿ, ನಿರ್ದೇಶಕರು, ಎಸ್.ಜೆ.ವಿ.ಪಿ. ವಿದ್ಯಾಪೀಠ (ರಿ) ಹರಿಹರ
- ಡಿ.ಎಂ. ಮಂಜುನಾಥಯ್ಯ, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹಶಿಕ್ಷಕರ ಸಂಘ, ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್, ಹರಿಹರ
- ಡಿ.ಎಂ. ಜಯದೇವಯ್ಯ ಪ್ರಥಮ ದರ್ಜೆ ಗುತ್ತಿಗೆದಾರರು, ಸಾಲಕಟ್ಟೆ
- ಬಸವರಾಜಯ್ಯ ಎಸ್.ಎಂ, ರಾಜ್ಯ ಕಾರ್ಯದರ್ಶಿಗಳು, ಡೆಕೋರೇಷನ್ ಅಂಡ್ ಶಾಮಿಯಾನ ಶ್ರೀ ವೀರಭದ್ರೇಶ್ವರ ಡೆಕೋರೇಷನ್, ದಾವಣಗೆರೆ.
- ಮಧು ಕೆ.ಎಂ. ಮಧು ಎಂಟರ್‌ಪ್ರೈಸಸ್, ಹಾಲೇಕಲ್ಲು.

॥ಶ್ರೀ ಸಿದ್ದೇಶ್ವರ ಪ್ರಸನ್ನ॥

## ಮದುವೆಯ ಮಮತೆಯ ಕರೆಯೋಲೆ

ಹರಿಹರ ತಾಲ್ಲೂಕು ಒಡೆಯರ ಬಸವಾಪುರ ಗ್ರಾಮದ
ದಿ॥ ಶಾಂತಮ್ಮ ಬಸಯ್ಯ ಮಾದಾಪುರದರ ಇವರ ಮಕ್ಕಳು
ಮಲೇಬೆನ್ನೂರು ಬಸವೇಶ್ವರ ಬಡಾವಣೆ ವಾಸಿಗಳಾದ
ಶ್ರೀಮತಿ ರುದ್ರಮ್ಮ ಶ್ರೀ ಎಂ. ಕರಿಬಸಯ್ಯ ಇವರ ಸಹೋದರರಾದ
ಶ್ರೀಮತಿ ಲಲಿತಮ್ಮ ಶ್ರೀ ಬಿ. ವೀರಯ್ಯ
ಕೋಲಾರ ತಾಲ್ಲೂಕು ವೇಮಗಲ್ ಹೋಬಳಿ, ಮಲಿಯಪ್ಪನಹಳ್ಳಿ ಗ್ರಾಮದ
ಶ್ರೀಮತಿ ಶೋಭಾ ಶ್ರೀ ರಾಜಣ್ಣ, ಹಾಲಿ ವಾಸ ಬಸವೇಶ್ವರ ನಗರ, ಬೆಂಗಳೂರು.

ಇವರುಗಳು ಮಾಡುವ ವಿಜ್ಞಾಪನೆಗಳು.

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕೆ 1946ಕ್ಕೆ ಶ್ರೀ ಕ್ರೋಧಿನಾಮ ಸಂವತ್ಸರದ ದಕ್ಷಿಣಾಯಣೇ ಹಿಮಂತ ಋತು ಮಾರ್ಗಶಿರ ಮಾಸ ಶುಲ್ಕ ಪಕ್ಷ ದಿನಾಂಕ : 06.12.2024ನೇ ಶುಕ್ರವಾರ ಬೆಳಗ್ಗೆ 9.00 ರಿಂದ 9.20ರ ವರೆಗೆ ಸಲ್ಲುವ ಧನಸ್ಸು ಲಗ್ನದಲ್ಲಿ ಮಾಂಗಲ್ಯಧಾರಣೆ ಮತ್ತು ಅಕ್ಷತಾರೋಹಣ

**ಚಿ॥ ರಾ॥ ಶ್ರೀನಿವಾಸ್ ಬಿ.ವಿ.**
(ಶ್ರೀಮತಿ ಲಲಿತಮ್ಮ ಶ್ರೀ ಬಿ. ವೀರಯ್ಯನವರ ಜೇಷ್ಠ ಪುತ್ರ)

**ಚಿ॥ ಕುಂ॥ ಸೌ॥ ಮೇಘುಶ್ರೀ ಆರ್.**
(ಶ್ರೀಮತಿ ಶೋಭಾ ಶ್ರೀ ರಾಜಣ್ಣನವರ ಜೇಷ್ಠ ಪುತ್ರಿ)

ಇವರ ವಿವಾಹ ಮಹೋತ್ಸವವನ್ನು ಎಸ್.ಎಸ್. ಕನ್‌ವೆನ್‌ಷನ್ ಹಾಲ್, ಶಾಮನೂರು ರಸ್ತೆ, ದಾವಣಗೆರೆ. ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕುಟುಂಬ ಸಮೇತರಾಗಿ ಆಗಮಿಸಿ ನೂತನ ವಧು-ವರರನ್ನು ಆಶೀರ್ವದಿಸಬೇಕಾಗಿ ಕೋರುವ.

ತಮ್ಮ ಆಗಮನಾಭಿಲಾಷಿಗಳು :
ಶ್ರೀಮತಿ ಲಲಿತಮ್ಮ ಶ್ರೀ ಬಿ. ವೀರಯ್ಯ ಮತ್ತು ಸಹೋದರರು, ಮಲೇಬೆನ್ನೂರು.
ಶ್ರೀಮತಿ ಶೋಭಾ ಶ್ರೀ ರಾಜಣ್ಣ ಮತ್ತು ಸಹೋದರರು, ಬೆಂಗಳೂರು.
ಡಾ॥ ಬಿ.ವಿ. ದೀಪಕ್, ಎಂ.ಎಸ್., ಆರ್ಥೋ

ಆರತಕ್ಷತೆ : 05.12.2024ನೇ ಗುರುವಾರ ಸಂಜೆ 7.00 ರಿಂದ
ಮುಹೂರ್ತ : 06.12.2024ನೇ ಶುಕ್ರವಾರ
ಲಗ್ನ : ಧನಸ್ಸು, ಬೆಳಿಗ್ಗೆ : 9.00 ರಿಂದ 9.20ರ ವರೆಗೆ
ಸ್ಥಳ : ಎಸ್‌ಎಸ್ ಕನ್‌ವೆನ್‌ಷನ್ ಹಾಲ್, ದಾವಣಗೆರೆ.

ತಮ್ಮ ಸುಖಾಗಮನವನ್ನು ಬಯಸುವವರು :
ಮಾದಾಪುರದ ಸಹೋದರರು,
ಮಲೇಬೆನ್ನೂರು ಮತ್ತು ಒಡೆಯರ ಬಸವಾಪುರ
ಕೋನಪ್ಪರ ವಂಶಸ್ಥರು, ನಂದಿಗುಡಿ
ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.



ಶ್ರೀಮತಿ ಲಲಿತಮ್ಮ ಮತ್ತು ಶ್ರೀ ಬಿ. ವೀರಯ್ಯ
ಸದಸ್ಯರು, ಪುರಸಭೆ, ಮಲೇಬೆನ್ನೂರು.
ಮಾಜಿ ಅಧ್ಯಕ್ಷರು, ಶ್ರೀ ನಂದಿ ಪತ್ತಿನ ಸಹಕಾರ ಸಂಘ, ಮಲೇಬೆನ್ನೂರು.
ಮಾಜಿ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಲ ನಿಯಮಿತ, ಬೆಂಗಳೂರು.
ಮಾಜಿ ಅಧ್ಯಕ್ಷರು, ಲಯನ್ಸ್ ಕ್ಲಬ್, ಮಲೇಬೆನ್ನೂರು.

ಆತ್ಮೀಯರೇ, ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

॥ ಶ್ರೀ ಉಜ್ಜಿನಿ ಸಿದ್ದೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ಜಿ॥ ತಾ॥ ಕೆರೆಯಾಗಳಹಳ್ಳಿ ಗ್ರಾಮದ ವಾಸಿ
ವೀರೇಂದ್ರ ಪಾಟೀಲ್ ಮತ್ತು ಸಹೋದರರು
ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 27.11.2024ನೇ ಬುಧವಾರ ಮಧ್ಯಾಹ್ನ 12.05ಕ್ಕೆ ನಮ್ಮ ಪೂಜ್ಯ ತಂದೆಯವರಾದ

**ಶ್ರೀ ಕೆ.ಜಿ. ಗುರುಸಿದ್ದನಗೌಡ್ರು**

ಹಾಗೂ

ದಿನಾಂಕ : 30.11.2024ನೇ ಶನಿವಾರ ಬೆಳಿಗ್ಗೆ 9.44 ಕ್ಕೆ ನಮ್ಮ ಪೂಜ್ಯ ತಾಯಿಯವರಾದ

**ವೀರಮ್ಮನವರು**

ಇವರುಗಳು, ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ : 05.12.2024ನೇ ಗುರುವಾರ ಬೆಳಿಗ್ಗೆ 10.30ಕ್ಕೆ ಮೃತರ ಸ್ವಗೃಹ ದಾವಣಗೆರೆ ತಾ. ಕೆರೆಯಾಗಳಹಳ್ಳಿ ಗ್ರಾಮದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ಮಂಜುನಾಥ್ ಮತ್ತು ಮಕ್ಕಳು, ವೀರೇಂದ್ರ ಪಾಟೀಲ್ ಮತ್ತು ಮಕ್ಕಳು,
ಶಿವಪ್ರಸಾದ ಮತ್ತು ಮಕ್ಕಳು
ಗೌಡ್ರು ವಂಶಸ್ಥರು, ಕೆರೆಯಾಗಳಹಳ್ಳಿ ಹಾಗೂ ಬಂಧು-ಮಿತ್ರರು.

ಅಣ್ಣಪ್ಪ ಟ್ರೇಡರ್ಸ್, ಎಪಿಎಂಸಿ ಯಾರ್ಡ್, ದಾವಣಗೆರೆ. 81055 42240


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas